ಕಲ್ಯಾಣ ಕಿರಣ

ಮೇ-2012 ಬೆಲೆ. 20/-

879ನೆಯ ಬಸವ ಜಯಂತಿಯ ಶುಭಾಶಯಗಳು





ಸಂಸತ್ ಸದಸ್ಯರಾದ ಡಿ.ಬಿ.ಚಂದ್ರೇಗೌಡ ಅವರಿಂದ ಬಸವ ಜಯಂತಿ ಉದ್ಘಾಟನೆ





ಸಂಸತ್ ಸದಸ್ಯರಾದ ಡಿ.ಬಿ.ಚಂದ್ರೇಗೌಡರಿಗೆ ಸನ್ಮಾನ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಕೃಷ್ಣಪ್ಪನವರು

ಸಂಪುಟ-42 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-05 ಮೇ- 2012 ವಾರ್ಷಿಕ ಚಂದಾ 200 ರೂ.

ಬಸವಾಷ್ಟಕ

ನತಜನ ರಕ್ಷಕ ಶ್ರೀಗುರು ಬಸವ
ಲಿಂಗಾಯತ ಸಂಸ್ಥಾಪಕ ಶ್ರೀ ಗುರು ಬಸವ
ಇಷ್ಟಪ್ರದಾಯಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 1 ॥

ವಚನ ಶಾಸ್ತ್ರಸಾರ್ವಭೌಮ ಶ್ರೀ ಗುರು ಬಸವ
ನವ ಪಥ ನಿರ್ಮಾಪಕ ಶ್ರೀಗುರು ಬಸವ
ಸಮತಾವಾದಿ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 2 ॥

ಇಷ್ಟಲಿಂಗದಾತ ಶ್ರೀ ಗುರು ಬಸವ
ಇಷ್ಟಲಿಂಗಧಾರಕ ಶ್ರೀ ಗುರು ಬಸವ
ಇಷ್ಟಲಿಂಗ ಪೂಜಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 3 ॥

ವಾಕ್ಸಿದ್ಧಿ ಪುರುಷ ಶ್ರೀ ಗುರು ಬಸವ
ಪಂಚ ಪರುಷ ಶ್ರೀ ಗುರು ಬಸವ
ಜೀವನ್ಮುಕ್ತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 4 ॥

ಪತಿತೋದ್ಧಾರಕ ಶ್ರೀ ಗುರು ಬಸವ
ದಲಿತೋದ್ಧಾರಕ ಶ್ರೀ ಗುರು ಬಸವ
ಪಾವನಚರಿತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 5 ॥

ಮಂತ್ರ ಪುರುಷ ಶ್ರೀ ಗುರು ಬಸವ
ಕ್ರಾಂತಿಯೋಗಿ ಶ್ರೀ ಗುರು ಬಸವ
ಶಾಂತಿದೂತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 6 ॥

ಶರಣ ಪ್ರೇಮಿ ಶ್ರೀ ಗುರು ಬಸವ
ಶರಣ ಪ್ರೀತ ಶ್ರೀ ಗುರು ಬಸವ
ಶರಣ ಪಥದಾತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 7 ॥

ಮುಕ್ತಿದಾಯಕ ಶ್ರೀ ಗುರು ಬಸವ
ಭಕ್ತೋದ್ಧಾರಕ ಶ್ರೀ ಗುರು ಬಸವ
ಬಸವಾತ್ಮಜೆ ಪಿತ ಶ್ರೀ ಗುರು ಬಸವ
ಸಚ್ಚಿದಾನಂದ ಸುತ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ 8 ॥

ರಚನೆ- ಮಾತಾಜಿ

ಕಿರಣಗನ್ನಡಿ

ಮುಖಪುಟ : ಬೆಂಗಳೂರಿನ ಬಸವ ಮಂಟಪದಲ್ಲಿ 879ನೆಯ ಬಸವ ಜಯಂತಿ ಆಚರಣೆ.
2 ಮತ್ತು 3ನೆಯ ಪುಟ ಬೆಂಗಳೂರಿನ ಬಸವ ಜಯಂತಿಯ ಭಾವಚಿತ್ರಗಳು
4ನೆಯ ಪುಟ ಚಾಮರಾಜನಗರ ಪ್ರವಚನ ಸಮಾರೋಪ ಸಮಾರಂಭದ ಭಾವಚಿತ್ರಗಳು.

ಮೇ-ಜೂನ್ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆ -ಉತ್ಸವಗಳು

1.	ಬಸವ ಗಂಗೋತ್ರಿಯಲ್ಲಿ ಬಸವೋತ್ಸವ	ಮೇ 27
2.	ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 18ನೆಯ ಲಿಂಗೈಕ್ಯ ಸಂಸ್ಮರಣೆ	ಜೂನ್ 30

ಕಲ್ಯಾಣ ಕಿರಣವೇ ಆಹ್ವಾನ ಪತ್ರಿಕೆ

ಶರಣ ಬಂಧುಗಳೇ,

ಕಾರ್ಯಕ್ರಮಗಳು ಮೇಲಿಂದ ಮೇಲೆ ಆಗುತ್ತಲಿವೆ. ಭಕ್ತರ ಸಂಖ್ಯೆ ಬೆಳೆಯುತ್ತಲಿದೆ. ಎಲ್ಲರಿಗೂ ಪ್ರತ್ಯೇಕ ಆಹ್ವಾನ ಪತ್ರಿಕೆ ಕಳಿಸಲು ಸಾಧ್ಯವಿಲ್ಲದ ಮಾತಾಗಿದೆ. ಆದ್ದರಿಂದ ಕಲ್ಯಾಣ ಕಿರಣ ಮಾಸ ಪತ್ರಿಕೆಯಲ್ಲಿ ಕೊಟ್ಟ ಮಾಹಿತಿಯನ್ನೇ ನಿಮ್ಮ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಪ್ರತ್ಯೇಕ ಆಹ್ವಾನವನ್ನು ನಿರೀಕ್ಷಿಸದೆ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ. -ಮಾತಾಜಿ

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010 Phone : 080-23131476, 22923736. Send SMS to 9738028585, 8892912123
Email :- kalyanakirana1970@gmail.com

ಸಂಪಾದಕೀಯ :

1. ಬಸವ ಜಯಂತಿ – ಬಸವಣ್ಣನವರಿಗೆ ಮೀಸಲು

ಒಬ್ಬರು ಬಸವ ಭಕ್ತರೆಂದು ಹೇಳಿಕೊಳ್ಳುತ್ತಾರೆ. ಮಗನ ಮದುವೆಯಲ್ಲಿ ವಚನ ಗ್ರಂಥಗಳನ್ನು ಸಹ ಪ್ರಕಟಿಸಿ ಹಂಚಿದರು. ಆದರೆ ಅವರ ತತ್ತ್ವನಿಷ್ಠೆ ಪರೀಕ್ಷೆಗೆ ಒಳಪಡುವಂತಾಯಿತು. ಅವರ ಮೊಮ್ಮಗನ ನಾಮಕರಣವನ್ನು ಬಸವ ಜಯಂತಿ, ದಿ.24-4-2012ರಂದು ಇಟ್ಟುಕೊಂಡರು. ಅಂದರೆ ಅವರ ಮನೆಯ ಸಂತೋಷ ಸಮಾರಂಭದಲ್ಲಿ ಭಾಗವಹಿಸುವವರೆಲ್ಲ ಸಾರ್ವಜನಿಕ ಬಸವ ಜಯಂತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶವನ್ನು ಇವರು ಅಹ್ವಾನಿಸಿ, ತಪ್ಪಿಸಿದಂತಾಗಲಿಲ್ಲವೆ ? ಸಿಖ್ಖರು ಗುರುನಾನಕ ಜಯಂತಿಯಂದು ಬೇರಾವ ಧಾರ್ಮಿಕ ಸಮಾರಂಭವನ್ನು ಇಡುವುದಿಲ್ಲ ; ಎಲ್ಲರೂ ಒಗ್ಗಟ್ಟಿನಿಂದ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಜೈನರು ಮಹಾವೀರ ಜಯಂತಿಯಂದು ಒಗ್ಗಟ್ಟಿನಿಂದ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಸಾಮಾನ್ಯವಾಗಿ ಜೈನ ಮಹಿಳೆಯರು ಬಹಿರಂಗವಾಗಿ ಓಡಾಡುತ್ತಿರಲಿಲ್ಲ. ಈಗ ಅವರಲ್ಲಿ ಎಷ್ಟು ಜಾಗೃತಿ ಉಂಟಾಗಿದೆ ಎಂದರೆ ಎಲ್ಲರೂ ಒಂದೇ ಬಣ್ಣದ ವಸ್ತ್ರ(ಸೀರೆ)ಗಳನ್ನು ಉಟ್ಟು ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಮರಾಠಿಗರ ಒಗ್ಗಟ್ಟು ಅಭಿಮಾನದ ಬಗ್ಗೆ ಉಸಿರೆತ್ತುವಂತಿಲ್ಲ. ಶಿವಾಜಿ ಜಯಂತಿಯನ್ನು ಅತ್ಯಂತ ಉತ್ಸಾಹ ಒಗ್ಗಟ್ಟಿನಿಂದ ಮಾಡುತ್ತಾರೆ. ಲಿಂಗಾಯತರು ಬಸವ ಜಯಂತಿಯಂದೇ ಅಂಗಡಿ ಉದ್ಘಾಟನೆ, ಗೃಹ ಪ್ರವೇಶ, ಮದುವೆ, ನಾಮಕರಣ ಹೀಗೆ ಇಟ್ಟುಕೊಳ್ಳುತ್ತಾರೆ. ಇದು ಶುದ್ಧಾಂಗ ತಪ್ಪು. ಅಂದು ಮನೆಯಲ್ಲಿ ಗುರು ಬಸವಣ್ಣನವರ ಪೂಜೆ ಮಾಡಿ, ನಂತರ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಬೇಕು. ಬಸವ ಜಯಂತಿ ಉತ್ಸವಗಳನ್ನು ಏರ್ಪಡಿಸಬೇಕು. ಮೇಲೆ ಪ್ರಸ್ತಾಪಿಸಿದ ಶರಣರು ಬಸವ ಜಯಂತಿಯಂದು (ಈ ಸಲ ಮಂಗಳವಾರ ಬಂದಿತ್ತು. ಸರ್ಕಾರಿ ರಜೆ ಇತ್ತು. ನಾಮಕರಣವನ್ನು 22 ಭಾನುವಾರದಂದು ಇಡಬಹುದಿತ್ತು.) ಮೊಮ್ಮಗನ ನಾಮಕರಣ ಇಟ್ಟುಕೊಂಡುದಲ್ಲದೆ ದಿ.24ರಂದು ಬಸವ ಜಯಂತಿಯ ಶುಭದಿನದಂದು ಇಟ್ಟುಕೊಳ್ಳಲಾಗಿದೆ ಎಂದೂ ಸಹ ಪ್ರಸ್ತಾಪಿಸಿಲ್ಲ. ಅಂದರೆ ಅವರು ನಾಮಕರಣ ಇಟ್ಟುಕೊಂಡ ದಿ.24ರಂದು ಬಸವ ಜಯಂತಿ ಇದೆ ಎಂಬ ಅರಿವು ಸಹ ಅವರಿಗೆ ಇಲ್ಲವೇ ? ಎಂಥಾ ದುರ್ದೈವ ! ವಚನಾಭ್ಯಾಸಿಗಳದೇ ಈ ಪರಿಸ್ಥಿತಿಯಾದರೆ ಇನ್ನು ಧರ್ಮದ ಸೋಂಕೂ ಇಲ್ಲದ ಲಿಂಗಾಯತರ ಪರಿಸ್ಥಿತಿ ಹೇಗಿರಬೇಕು?!

ಬಸವ ಜಯಂತಿಗೆ ರಜೆ ಬೇಡವೆ ?

ಕೆಲವು ದಿನಪತ್ರಿಕೆಗಳ ವಾಚಕರ ಅಭಿಪ್ರಾಯ ವಿಭಾಗದಲ್ಲಿ "ಗುರು ಬಸವಣ್ಣನವರು ಕಾಯಕವೇ ಕೈಲಾಸವೆಂದು ಸಾರಿದ್ದಾರೆ. ಆದ್ದರಿಂದ ಅವರ ಜಯಂತಿಗೆ ರಜೆ ಬೇಡ. ಅಂದು ಎರಡು ತಾಸು ಹೆಚ್ಚುವರಿಯಾಗಿ ಸರ್ಕಾರಿ ಆಫೀಸುಗಳಲ್ಲಿ ಕೆಲಸ ಮಾಡಬೇಕು." ಎಂದು ಪತ್ರ ಬರೆದಿದ್ದಾರೆ. ಇದು ಅಸಂಬದ್ಧ ವಿಚಾರ. ಕೆಲಸದ ದಿನಗಳಲ್ಲಿ ಸರ್ಕಾರಿ ಆಫೀಸುಗಳಲ್ಲಿ ಕೆಲಸವಾಗುವುದೇ ದುರ್ಲಭ. ಮಹಾತ್ಮರ ಜಯಂತಿಗೆ ರಜೆ ಕೊಡುವ ಉದ್ದೇಶ ಅವರ ಸಂದೇಶಗಳನ್ನು ಕುರಿತು ಚಿಂತನೆ ಮಾಡಲೆಂದು. ಕಾಯಕದ ಮಹತ್ವವನ್ನು ಬಸವ ಜಯಂತಿ ದಿನ ತಿಳಿದುಕೊಂಡರೆ ಉಳಿದ 364 ದಿವಸ ಚೆನ್ನಾಗಿ ಕೆಲಸ ಮಾಡುವರು. ಜಯಂತಿಯಂದು ಪೂಜೆಯಲ್ಲಿ ಭಾಗವಹಿಸುವಿಕೆ, ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿಕೆ, ಮೆರವಣಿಗೆ ಉತ್ಸವಗಳಲ್ಲಿ ಪಾಲ್ಗೊಳ್ಳುವಿಕೆ ಸಾಧ್ಯವಾಗುವುದು. ಆದ್ದರಿಂದ ಮಹಾತ್ಮರ ಜಯಂತಿಗೆ ರಜೆ ಅತ್ಯವಶ್ಯಕ. ನಮಗಾಗಿ ತ್ಯಾಗ ಮಾಡಿ ದಿವ್ಯ ಸಂದೇಶವನ್ನು ಕೊಟ್ಟ ಮಹಾತ್ಮರಿಗೆ ಸರ್ಕಾರವು ಸಲ್ಲಿಸುವ ಕೃತಜ್ಞತೆಯ ಕೊಡುಗೆ ಸಾರ್ವಜನಿಕ ರಜೆ. ಇದರಿಂದ ಎಲ್ಲ ಧರ್ಮ, ಜಾತಿಗಳವರೂ ಮಹಾತ್ಮರ ಬಗ್ಗೆ ತಿಳಿಯಲು ಅವಕಾಶ ಸಿಗುವುದು. ಬಸವ ಜಯಂತಿ ರಜೆ ಅತ್ಯವಶ್ಯಕ. ಯಾರಾದರೂ ಮೂರ್ಖರ ಮಾತು ಕೇಳಿ ಸರ್ಕಾರ ರಜೆ ರದ್ದುಪಡಿಸಿದರೆ ತೀವ್ರವಾಗಿ ಪ್ರತಿಭಟಿಸಬೇಕಾಗುವುದು ಅನಿವಾರ್ಯವಾಗುವುದು.

2. ದೀಕ್ಷೆಗೆ ಭಯಪಡುವುದೇಕೆ ?

ಒಬ್ಬರು ಸುಮಾರು 70 ವರ್ಷ ದಾಟಿದವರಿರಬೇಕು. ದೀಕ್ಷೆಗೆಂದು ಬಂದರು. ಅವರೇನೂ ಅಪರಿಚಿತರಲ್ಲ. ಬೆಂಗಳೂರು ಬಸವ ಮಂಟಪಕ್ಕೆ 30 ವರ್ಷಗಳಿಂದ ಬರುತ್ತಿದ್ದವರು. ಭಕ್ತಿವಂತರು, ಉದಾರಿಗಳು. ಅವರಿಬ್ಬರು ಅಕ್ಕತಂಗಿಯರು. ಅಕ್ಕನವರೇ ದೀಕ್ಷೆ ಪಡೆದುಕೊಂಡವರು. ವಯಸ್ಸು ಜಾಸ್ತಿಯಾಗಿದ್ದರೂ ಕಣ್ಣು, ಕಿವಿ, ಎಲ್ಲ ನಿಚ್ಚಳವಾಗಿವೆ ಪ್ರತಿಜ್ಞೆಯನ್ನು ಸಹ ಚೆನ್ನಾಗಿ ಮಾಡಿದರು. ದೀಕ್ಷೆ ಪೂರೈಸಿದ ಮೇಲೆ "ಇಂದು ನನ್ನ ಜೀವನ ಸಾರ್ಥಕವಾಯಿತು. ಬಹುದೊಡ್ಡ ಆಸೆ ನೆರವೇರಿತು. ನನ್ನ ತಂಗಿ ದೀಕ್ಷೆ ಪಡೆದುಕೊಳ್ಳಲಾಗದೆ ಅದೇ ಕೊರಗಿನಲ್ಲೇ ತೀರಿಕೊಂಡಳು." ಎಂದರು. ನನಗೆ ಆಶ್ಚರ್ಯವಾಯಿತು. "ನೀವಿಬ್ಬರೂ 30 ವರ್ಷಕಾಲ ಬಸವ ಮಂಟಪಕ್ಕೆ ಬರುತ್ತಿದ್ದೀರಿ. ದೀಕ್ಷೆ ಪಡೆದುಕೊಳ್ಳಲೇ ಇಲ್ಲವೇ ?" ಎಂದು ಕೇಳಿದೆ.

"ಇಲ್ಲ, ಪಾಲಿಸಲು ಆಗುತ್ತೋ ಇಲ್ಲವೋ ಎಂದು ನಮ್ಮ ಮಕ್ಕಳು ಒಪ್ಪಿಗೆಯನ್ನೇ ಕೊಟ್ಟಿರಲಿಲ್ಲ. ಈಗ ಒಪ್ಪಿಗೆ ಕೊಟ್ಟರು," ಅಜ್ಜಿ ಹೇಳಿದರು..

"ಇಷ್ಟಲಿಂಗ ದೀಕ್ಷೆ ಎಲ್ಲಾ ಲಿಂಗಾಯತರೂ ತಮ್ಮ 12-13ನೆಯ ವಯಸ್ಸಿನಲ್ಲಿ ಕಡ್ಡಾಯವಾಗಿ ಪಡೆಯಬೇಕಾದುದು. ಕಡೆಯ ಪಕ್ಷ ಮದುವೆ ಸಮಯದಲ್ಲಾದರೂ ಪಡೆಯಲೇಬೇಕು. ಏಕೆ ವಿನಾಕಾರಣ ಭಯಪಡಬೇಕು ?"

" ನಮಗೆ ವಯೋಧರ್ಮದ ಕಾರಣ ತುಂಬಾ ಬಾಯಾರಿಕೆಯಾಗುತ್ತದೆ. ಸ್ನಾನಪೂಜೆ ಮಾಡಿ ನೀರು ಕುಡಿಯುವ ತನಕ ಕಾಯಲು ಆಗುವುದಿಲ್ಲ. ಎದ್ದ ತಕ್ಷಣ ಕೈಕಾಲು ತೊಳೆದು ಭಸ್ಮಧರಿಸಿಕೊಂಡು ನೀರು ಕುಡಿಯುತ್ತೇನೆ. ಹೀಗಾಗಿ ದೀಕ್ಷೆ ತೆಗೆದುಕೊಳ್ಳಲು ಹಿಂಜರಿಯುತ್ತಿದ್ದೆ." ಅಜ್ಜಿ ಹೇಳಿದರು.

ಇದು ಒಂದು ಆಲೋಚನೆ ಮಾಡುವಂತಹ ಸಂಗತಿ. ಶರಣೆ ಗಂಗಮ್ಮಜ್ಜಿ. (ನಮ್ಮ ತಾಯಿಯವರು) ಸುಮಾರು 88 ವರ್ಷ. ಇಂದಿಗೂ ಸ್ನಾನಪೂಜೆ ಇಲ್ಲದೆ ನೀರನ್ನೂ ಸಹ ಕುಡಿಯುವುದಿಲ್ಲ. ಆದರೆ ಅಂಥ ಸಂಕಲ್ಪಶಕ್ತಿ ಎಲ್ಲರಿಗೂ ಇರುವುದಿಲ್ಲ. ಮೇಲಾಗಿ ನಿಸರ್ಗೋಪಚಾರದವರು ಬೆಳಿಗ್ಗೆ ಎದ್ದ ತಕ್ಷಣ ಖಾಲಿ ಹೊಟ್ಟೆಗೆ ತಂಬಿಗೆ ನೀರನ್ನು ಕುಡಿಯಿರಿ ಎಂದು ಬೇರೆ ಪ್ರಚಾರ ಮಾಡುವರು. ಬೆಳಿಗ್ಗೆ ಸ್ನಾನ-ಪೂಜೆ ಮಾಡಿ ತೀರ್ಥವನ್ನು ಮೊದಲು ಕುಡಿದು ನಂತರ ನೀರು ಕುಡಿಯುವ ಸಂಸ್ಕೃತಿ ವಿಶೇಷವಾಗಿ ಲಿಂಗಾಯತ ಸಮಾಜದಲ್ಲಿದೆ. ಉಳಿದ ಜನರಲ್ಲಿ ಅಂಥ ಪದ್ಧತಿ ಇರದು. ಹೀಗಾಗಿ ಅವರಿಗೆ ಅದು ಸಮ್ಮತ ಎನಿಸುವುದು. ಇಷ್ಟಲಿಂಗ ದೀಕ್ಷೆ ಕೊಟ್ಟಾಗ ಮೊದಲಿನ ದಿನಗಳಲ್ಲಿ ದಿನಕ್ಕೆ ಎರಡು ಹೊತ್ತು ಲಿಂಗಪೂಜೆ ಮಾಡಿರಿ ಎಂದು ಹೇಳುತ್ತಿದ್ದೆವು. ಈಗ ಹಾಗೆ ಪ್ರತಿಜ್ಞೆ ಮಾಡಿಸುವುದಿಲ್ಲ. ಏಕೆಂದರೆ ಜೀವನ ಶೈಲಿ ಬದಲಾಗಿದೆ. ಸಂಜೆಯ ವೇಳೆ ಹೊರಗಡೆ ಕಾರ್ಯಕ್ರಮಗಳಲ್ಲಿ ಇರುತ್ತಾರೆ. ಹೋದಲ್ಲೆಲ್ಲ ಇಷ್ಟಲಿಂಗಪೂಜೆ ಮಾಡಲು ಸಾಧ್ಯವಾಗದು. ಬೆಳಿಗ್ಗೆ ಒಂದು ಹೊತ್ತು ಮನೆ ಬಿಡುವ ಮುನ್ನ ಪೂಜೆ ಮಾಡುವುದು ಕಡ್ಡಾಯ. ವಯಸ್ಸಾದವರು, ಕಾಯಿಲೆಯವರು ಬೆಳಗಿನ ಜಾವ ನೀರು ಕುಡಿಯಬಹುದು. ರಕ್ತದಲ್ಲಿ ಸಕ್ಕರೆಯ ಅಂಶ ಕಡಿಮೆಯಾದರೆ ಸಿಹಿ ತಿನ್ನಬಹುದು. ಔಷಧಿ ಸೇವಿಸುವುದಿದ್ದರೆ ಸೇವಿಸಬಹುದು. ಹುಟ್ಟಿದಾಗ ಮಾಡಿಸಿದುದು ಲಿಂಗಧಾರಣೆ; ನಂತರ ಒಮ್ಮೆ ದೀಕ್ಷೆ ಆಗಬೇಕು. ತಲೆಯ ಮೇಲೆ ಗುರುವು ಹಸ್ತವನ್ನಿಟ್ಟು ಮಂತ್ರೋಪದೇಶ ಮಾಡುವುದು, ಇಷ್ಟಲಿಂಗಕ್ಕೆ ಚಿತ್ಕಳೆ ತುಂಬುವುದು ಮುಖ್ಯ ಕ್ರಿಯೆ. ಲಿಂಗಧಾರಣೆಯಲ್ಲಿ ಮಗುವಿನ ಪರವಾಗಿ ತಾಯಿತಂದೆ ಪ್ರತಿಜ್ಞೆ ಮಾಡಿರುತ್ತಾರೆ. ಲಿಂಗದೀಕ್ಷೆಯಲ್ಲಿ ವ್ಯಕ್ತಿಯು ತಾನೇ ಪ್ರತಿಜ್ಞಾ ಬದ್ಧನಾಗುತ್ತಾನೆ. ಆದ್ದರಿಂದ ಪ್ರತಿಯೊಬ್ಬರೂ ಕನಿಷ್ಠ ಪಕ್ಷ ಮದುವೆಗೆ ಮುಂಚೆಯಾದರೂ ದೀಕ್ಷೆಯನ್ನು ಪಡೆದುಕೊಳ್ಳಬೇಕು. ಬೀದರ್ ಕಡೆ ವರನಿಗೆ ವಸ್ತ್ರಗಳನ್ನು ಕೊಡುವಾಗ ಲಿಂಗವಸ್ತ್ರಗಳನ್ನು ಕೊಡುವುದು ಸಾಂಪ್ರದಾಯಿಕವಾಗಿ ಕಡ್ಡಾಯವಾಗಿರುತ್ತದೆ.

ದೀಕ್ಷೆ ತೆಗೆದುಕೊಳ್ಳಲು ವಿಳಂಬ ಮಾಡಿದ ಅಜ್ಜಿಯವರ ಮುಂದಿದ್ದ ಇನ್ನೊಂದು ಸಮಸ್ಯೆ-ಅವರು ದೇಹವನ್ನು ಒಂದು ಕಾಲೇಜ್ ಆಸ್ಪತ್ರೆಗೆ ದೇಹದಾನ ಮಾಡಿದ್ದರು. ಇಷ್ಟಲಿಂಗವನ್ನು ಮುಂದೆ ಏನು

ಮಾಡಬೇಕು ? ಎಂಬುದೊಂದು ಸಮಸ್ಯೆ. ದೇಹದಾನ ಒಂದು ಪವಿತ್ರದಾನ ಮನೆಯಲ್ಲಿ ನೆರವೇರಿಸುವ ಕ್ರಿಯೆಗಳನ್ನೆಲ್ಲ ಮಾಡಿ ದೀಕ್ಷಿತರ ಇಷ್ಟಲಿಂಗವನ್ನು ತೆಗೆದು ಒಂದು ಬಟ್ಟೆಯಲ್ಲಿ ಕಟ್ಟಿಟ್ಟು ದೇಹವನ್ನು ಒಯ್ಯಲು ಪರವಾನಗಿ ಕೊಡಬೇಕು. ಆ ಇಷ್ಟಲಿಂಗವನ್ನು ದೀಕ್ಷೆ ಪಡೆಯುವ ವಯಸ್ಸಿನ ಮೊಮ್ಮಕ್ಕಳು, ಸಂಬಂಧಿಗಳಿಗೆ ಕೊಡಿಸಬೇಕು. ಆ ಅಜ್ಜಿ ಹೇಳಿದರು. "ನಾನು ಬುದ್ಧಿ ತಿಳಿದಾಗಿನಿಂದಲೂ ಪೂಜಿಸುತ್ತಾ ಬಂದಿರುವ ಇಷ್ಟಲಿಂಗವಿದು. ಬೇರೆಯವರಲ್ಲಿ ಅಂಥ ನಿಷ್ಠೆ ಎಲ್ಲಿ ಬರಬೇಕು ? ಅದಕ್ಕಾಗಿ ಹೊಳೆಯಲ್ಲಿ ಬಿಡಲು ನಾನು ಹೇಳುತ್ತೇನೆ. ಸರಿಯೆ ?" ಆಗಲಿ ಎಂದು ಒಪ್ಪಿಗೆಯನ್ನು ನೀಡಿದೆ. ನಶಿಸಿ ಹೋಗುತ್ತಿರುವ ಲಿಂಗಧಾರಣೆ, ಗರ್ಭಲಿಂಗಧಾರಣೆ, ಲಿಂಗಪೂಜೆ ಮುಂತಾದ ಕ್ರಿಯೆಗಳನ್ನು ಪುನಃ ಆಚರಣೆಗೆ ತರುವುದು ಅತ್ಯವಶ್ಯಕವಾಗಿದೆ.

ಶರಣ. ಶಿವಕುಮಾರ್ ಕಟಗಿಯವರ ಸ್ತುತ್ಯ ಕಾರ್ಯ

ಧಾರವಾಡದ ಶರಣ. ಶಿವಕುಮಾರ್ ಕಟಗಿಯವರು ದಿ. 27-4-2012ರಂದು ಒಂದು ಅಭಿನಂದನೀಯ ಕಾರ್ಯಕ್ರಮ ಇಟ್ಟುಕೊಂಡರು. ವೈದಿಕರು ಉಪನಯನಕ್ಕೆ ಎಷ್ಟು ಮಹತ್ವ ಕೊಡುವರು, ಲಿಂಗಾಯತರು ಲಿಂಗದೀಕ್ಷೆಗೆ ಮಹತ್ವವನ್ನೇ ಕೊಡುವುದಿಲ್ಲ ಎಂದು ಲಿಂಗಪೂಜೆಯ ಮಹತ್ವ ಮನಗಾಣಿಸಲು ನಮ್ಮ ಪೂಜಾ ಕಾರ್ಯಕ್ರಮ ಏರ್ಪಡಿಸಿದರು. ಅವರ ಮಕ್ಕಳಾದ ಕಾವೇರಿ ಮತ್ತು ಕರುಣ ಪ್ರಸಾದನಿಗೆ ದೀಕ್ಷೆ ಎಂದು ವಿಶೇಷ ಆಹ್ವಾನ ಪತ್ರಿಕೆ ಮುದ್ರಿಸಿ, ಸುಮಾರು 300 ಜನರನ್ನು ಆಮಂತ್ರಿಸಿ, ಪ್ರಸಾದ (ಊಟ)ದ ವ್ಯವಸ್ಥೆಯನ್ನು ಮಾಡಿಸಿ. ಶರಣ ಬಂಧುಗಳನ್ನು, ವಿಶ್ವವಿದ್ಯಾಲಯದ ಅಧ್ಯಾಪಕರನ್ನು, ವಿದ್ಯಾರ್ಥಿಗಳನ್ನೂ ಆಹ್ವಾನಿಸಿದ್ದರು. ಇಷ್ಟಲಿಂಗ ದೀಕ್ಷೆಯನ್ನು ಇಷ್ಟು ಅರ್ಥಗರ್ಭಿತವಾಗಿ, ವೈಭವಪೂರ್ಣವಾಗಿ ಮಾಡಿಸಿದ ನಾನು ಕಂಡಂತಹ ಮೊಟ್ಟಮೊದಲ ಪ್ರಸಂಗವಿದು. ಜಗತ್ತಿನ ಎಲ್ಲ ಧರ್ಮಗಳವರಲ್ಲೂ ಜಾಗೃತಿ ಉಂಟಾಗುತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಜೀವನ ಶೈಲಿಯಿಂದ ಧರ್ಮರಾಹಿತ್ಯ ಜೀವನದತ್ತ ಮುಖಮಾಡುತ್ತಿದ್ದ ಬಹುಪಾಲು ಜನರು ಪುನಃ ತಮ್ಮ ತಮ್ಮ ಧರ್ಮಗಳ ಅಧ್ಯಯನದತ್ತ ಮುಖ ಹೊರಳಿಸುತ್ತಿದ್ದಾರೆ. ಇಂಥಾ ಸಂಕ್ರಮಣ ಕಾಲದಲ್ಲಿ ಲಿಂಗಾಯತ ಧರ್ಮದ ಆಚಾರ-ವಿಚಾರ-ಸಂಸ್ಕೃತಿಯ ಪುನರುತ್ಥಾನ ಅತ್ಯಂತ ಅಗತ್ಯ ಎಂದೇ ಹೇಳಬೇಕಾಗಿದೆ. *****

ಶರಣ ವಾಣಿ

ಸಟೆಯನಾಡದಾತ ಭಕ್ತ
ಕುಟಿಲ ಕುಹಕವ ಮಾಡದಾತ ಭಕ್ತ
ನಿಟಿಲಾಕ್ಷನ ಧ್ಯಾನದಲ್ಲಿ ಇದ್ದಾತ ಭಕ್ತ
ನಮ್ಮ ಅಖಂಡೇಶ್ವರನ ಭಕ್ತಿ ಭಾವದಲ್ಲಿದ್ದಾತನೇ ಸದ್ಭಕ್ತ ನೋಡಾ.

ಸತ್ಯನೆಂದೆನಿಸಯ್ಯ ಎನ್ನ
ನಿತ್ಯನೆಂದೆನಿಸಯ್ಯ ಎನ್ನ
ಭಕ್ತನೆಂದೆನಿಸಯ್ಯ ಎನ್ನ
ಮುಕ್ತನೆಂದೆನಿಸಯ್ಯ ಎನ್ನ
ನಿನ್ನ ಪೂರ್ಣ ಒಲುಮೆಯ
ಲೆಂಕನೆಂದೆನಿಸಯ್ಯಾ ಎನ್ನ ಅಖಂಡೇಶ್ವರಾ.

ಭಕ್ತನಾಗಬೇಕು ಭವವ ಹರಿದು
ಭಕ್ತನಾಗಬೇಕು ಸಕಲ ಪ್ರಪಂಚವ ಮರೆದು
ಭಕ್ತನಾಗಬೇಕು ಆಶಾಪಾಶವನೆಲ್ಲ ಹರಿದು
ಭಕ್ತನಾಗಬೇಕು ನಮ್ಮ ಅಖಂಡೇಶ್ವರ ದಿವ್ಯ ಪಾದವ ನಂಬಿ


-ಶ್ರೀ ಷಣ್ಮುಖ ಶಿವಯೋಗಿಗಳು

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ

817ನೆಯ ಲಿಂಗೈಕ್ಯ ಸಂಸ್ಮರಣೆ



ಸೋಮ (ಶಿವ)ವಾರ ದಿ. 23-07-2012 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ

ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ

ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ [ಟೌನ್ ಹಾಲ್]

ಪುರಭವನದಲ್ಲಿ

❋ ಶರಣರ ಬರುವೆಮಗೆ ಪ್ರಾಣ ಜೀವಾಳ ❋

ಪ್ರಾಯೋಜಕರು :

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

2035, ಬಸವ ಮಂಟಪ, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್

ಬೆಂಗಳೂರು-560010, ದೂರವಾಣಿ : 080-23131476

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 817 ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ: ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನ, ಬೆಂಗಳೂರು,

ದಿ.೨೩-೦೭-೨೦೧೨, ಬೆಳಿಗ್ಗೆ. ೧೦-೩೦

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 817ನೆಯ ಲಿಂಗೈಕ್ಯ ದಿನವು ಶಿವ (ಸೋಮ) ವಾರ ದಿ. 23-7-2012ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 817ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ದಿ. 23-7-2012ರಂದು ಸರ್. ಪುಟ್ಟಣ್ಣಶೆಟ್ಟಿ ಟೌನ್‌ಹಾಲ್‌ದಲ್ಲಿ ಬೆಳಿಗ್ಗೆ 10-30ರಿಂದ 817ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯನ್ನು, ದಿ.24-7-2012ರಂದು ರಾಜಾಜಿನಗರದ 20ನೆಯ ಮುಖ್ಯರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಪೂಜೆಯೊಡನೆ ನೀಲಾಂಬಿಕಾ ಷಷ್ಠಿಯನ್ನು ಆಚರಿಸಲಾಗುತ್ತಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕಗಳನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿವೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಶರಣ ಎನ್. ಪುಟ್ಟರುದ್ರ, ಗೌರವಾಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

ದಿ. 23ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 817ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ (ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3-30 ರಿಂದ 5-30

ನೀಲಾಂಬಿಕಾ ಷಷ್ಠಿ - ದಿ.24-07-2012ರಂದು
ರಾಜಾಜಿ ನಗರದ ಬಸವ ಮಂಟಪದಲ್ಲಿ

ಸಾಮೂಹಿಕ ಇಷ್ಟಲಿಂಗ ಪೂಜೆಯೊಡನೆ

ಪರಮ ದಾಸೋಹವನು ನೆರೆ ಮಾಡಿ ಜಂಗಮದ
ಪರಮ ಪ್ರಸಾದವನು ಸವಿದು ಸುಖದಿ
ಕರದಿಷ್ಟಲಿಂಗದೊಳು ಶರೀರವನಿಂಬಿಟ್ಟ
ಕರುಣೆ ನೀಲಮ್ಮ ಶರಣು ಯೋಗಿನಾಥ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ. 24-7-2012ರಂದು 817ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30 ರಿಂದ ಬೆಂಗಳೂರಿನ ರಾಜಾಜಿ ನಗರದ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಆಗಮಿಸಿ ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ.

ವಿಶೇಷ ಮನವಿ :- ಸಾಮಾನ್ಯವಾಗಿ ಅನೇಕರು ಭಾನುವಾರಗಳನ್ನು ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ಮಹಾನುಭಾವರಿಗೆ ಗೌರವ ತೋರಿಸಲು ನಾವು ಅಂದೇ ಮಾಡಬೇಕು. ಒಂದು ರಜೆಯನ್ನು ಸಹ ಹಾಕಲಾರದ ಮನೋಭಾವ ಸರಿಯಲ್ಲ; ಅಂದು ಒಂದು ದಿವಸವಾದರೂ ಅಂಗಡಿ ಮುಚ್ಚಿ ಮಹಾತ್ಮರಿಗೆ ಗೌರವ -ಕೃತಜ್ಞತೆ ಸಲ್ಲಿಸಬೇಕು ಎಂಬ ಮನೋಭಾವ ಹೊಂದದೆ ಇರುವುದು ಸೂಕ್ತವಲ್ಲ. ಧರ್ಮಕ್ಕಾಗಿ ತನು-ಮನ- ಧನಗಳನ್ನು ಮಾತ್ರವಲ್ಲದೆ ಅಭಿಮಾನ -ಸಮಯ-ಪ್ರಾಣಗಳನ್ನು ಮೀಸಲಿಡಬೇಕು. ಬಸವ ಪಂಚಮಿ ಸೋಮವಾರ ಬಂದಿದ್ದು ರಜಾ ದಿನ ಅಲ್ಲದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

<u>ಬಸವ ಮಂಟಪಕ್ಕೆ ಬಸ್ ಮಾರ್ಗ</u>

ಮೆಜೆಸ್ಟಿಕ್‌ನಿಂದ 251,80ಎ, 265, 80ಇ ರೂಟಿನ ಸಿಟಿ ಬಸ್ಸುಗಳು ಬರುತ್ತವೆ.



ಬಸವ ಗಂಗೋತ್ರಿಯಲ್ಲಿ
ಎರಡನೆಯ ಬಸವೋತ್ಸವ
ದೇವ(ಭಾನು)ವಾರ ಮೇ 27ರಂದು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ 1975ರಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಗಿ, 1977ರಲ್ಲಿ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಣಿಯಾಯಿತು. ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿ ಆರಂಭದಿಂದಲೂ ಸಂಸ್ಥೆಯನ್ನು ಮುನ್ನಡೆಸಿದರು. ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್‌ನ 20ನೆಯ ಮುಖ್ಯ ರಸ್ತೆಯಲ್ಲಿ ಪ್ರಥಮ ಬಸವ ಮಂಟಪವು ನಿರ್ಮಾಣವಾಗಿ 1975ರ ಬಸವ ಜಯಂತಿಯಂದು ಉದ್ಘಾಟನೆಗೊಂಡಿತು. 1978ರಲ್ಲಿ ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬೆಂಗಳೂರು -ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು "ಬಸವ ಗಂಗೋತ್ರಿ ಆಶ್ರಮ" ಎಂಬ ಹೆಸರು ಹೊಂದಿದೆ. ಇಲ್ಲಿ ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತದೆ. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ನಡೆಸುತ್ತಲಿದೆ.

ಬಸವ ಗಂಗೋತ್ರಿಯಲ್ಲಿ ಬಸವಾಲಯವೊಂದನ್ನು ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿಂ॥ ಶರಣ. ಜಿ.ಎನ್.ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ -ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಬಸವ ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

ಬಸವ ಗಂಗೋತ್ರಿಯಲ್ಲಿ ಆಗಾಗ ಬಸವ ತತ್ವ ತರಬೇತಿ ಶಿಬಿರವನ್ನು, ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದೆಯಾದರೂ 2010 ನೇ ಇಸ್ವಿಯಿಂದ ವಾರ್ಷಿಕ ಉತ್ಸವವನ್ನಾಗಿ ಬಸವೋತ್ಸವವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ಅದರಂತೆ ದಿ.27-5-2012ರಂದು ಎರಡನೆಯ ಬಸವೋತ್ಸವವನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ 10-30ಕ್ಕೆ ಉದ್ಘಾಟನೆ. ದಿ. 27-5-2010ರಂದು ಜಗದ್ಗುರು ಶ್ರೀ ಚನ್ನಬಸವೇಶ್ವರ ಜ್ಞಾನ ಪೀಠ ಸ್ಥಾಪನೆಗೊಂಡಿದ್ದು ಪೂಜಾ ನಿಷ್ಠರು, ಬಹುಭಾಷಾ ಪರಿಣತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಪೀಠಾರೋಹಣದ ವಾರ್ಷಿಕೋತ್ಸವದ ಸಮಾರಂಭ ಜರುಗಲಿದೆ. ಪೂಜ್ಯರಿಗೆ ಅಭಿನಂದನೆ ಮತ್ತು ಗೌರವಾರ್ಪಣೆ ; ನಂತರ ಸಮಾರೋಪ.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223, 224, 226 ರೂಟ್ ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆಯ ಮೇರೆಗೆ ನಿಲ್ಲುತ್ತವೆ. ಬಸವ ಗಂಗೋತ್ರಿ ಪ್ರವೇಶ ದ್ವಾರವು ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯದಲ್ಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಲು ಕೋರುತ್ತೇವೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ
ಬೆಂಗಳೂರು -ಮೈಸೂರು ಹೆದ್ದಾರಿ
ಕುಂಬಳಗೋಡು -560074
ಬೆಂಗಳೂರು ದಕ್ಷಿಣ ತಾಲ್ಲೂಕು
ಮೊ: 9448386717

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್
ನಂ. 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು -560010
ಮೊ: 9663385657

ಚಾಮರಾಜ ನಗರದಲ್ಲಿ ವಿಶ್ವಧರ್ಮ ಪ್ರವಚನ

ಚಾಮರಾಜ ನಗರದ ಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ ವಿಶ್ವಧರ್ಮ ಪ್ರವಚನವು ದಿ.20-3-2012ರಂದು ಪ್ರಾರಂಭವಾಯಿತು. ಬನಹಟ್ಟಿಯ ಪ್ರವಚನ ಮುಗಿಸಿ 2-3 ದಿನ ಬಿಡುವು ಇದ್ದುದರಿಂದ ಪೂಜ್ಯ ಗಂಗಾ ಮಾತಾಜಿಯವರು ಅಲ್ಲಮಗಿರಿಯ ಸಂದರ್ಶನಕ್ಕೆ ಹೋದರು. ಅವರಿಗೆ ಅಲ್ಲಮಗಿರಿಯ ಲಿಂಗಾಯತ ಗಣಮೇಳಕ್ಕೆ ಬರಲು ಬಿಡುವಾಗಿರಲಿಲ್ಲ. ಸಿದ್ಧರಾಮ ಗಿರಿ (ಸಿದ್ದೋಬಾ ಡೊಂಗರ್)ಯನ್ನು ಸಂದರ್ಶಿಸಿ ಬರಲು ಹೊರಟರು. ಅದು ಬಹಳ ಕಡಿದಾದ ಮತ್ತು ಎತ್ತರವಾದ ಬೆಟ್ಟ. ಸಂದರ್ಶನವು ಸಾಂಗವಾಗಿ ನೆರವೇರಿತು. ಅಲ್ಲಿ ಪೂಜೆ-ಪ್ರಾರ್ಥನೆ ಸಲ್ಲಿಸಿ ಪ್ರಸಾದವನ್ನು ಮಾಡಿದರು. ಇಳಿದು ಬರುವಾಗ ಇನ್ನೇನು ಸ್ವಲ್ಪ ದೂರವಿದೆ ಎನ್ನುವಾಗ ಕಾಲು ಜಾರಿತು. ಕಾಲಿನ ಮೂಳೆ ಮುರಿಯಿತು. ಇಚಲಕರಂಜಿಯಲ್ಲಿ ವೈದ್ಯರು ಪ್ಲ್ಯಾಸ್ಟರ್ ಹಾಕಿದರು. ಸಣ್ಣ ಮಗುವಿನಂತೆ ಎತ್ತಿಕೊಂಡು ಕಾರಿನಲ್ಲಿ ಕೂರಿಸುವಂತಾಯಿತು. ವೇದಿಕೆಯ ಮೇಲೆ ಕರೆದೊಯ್ಯುವಾಗಲೂ ಮೂರು ಜನರು ಎತ್ತಿಕೊಂಡು ಹೋಗಿ ಕುರ್ಚಿ ಮೇಲೆ ಕೂರಿಸಬೇಕು. ತೊಡೆಯಿಂದ ಪಾದದವರೆಗೆ ಪ್ಲ್ಯಾಸ್ಟರ್ ಹಾಕಿದ್ದರಿಂದ ಕಾಲು ಚಾಚಿಕೊಂಡೇ ಕೂರಬೇಕು. ವೈದ್ಯರು ಸಂಪೂರ್ಣ ವಿಶ್ರಾಂತಿಯನ್ನು ಹೇಳಿದರು. ಆದರೆ ಪೂಜ್ಯ ಗಂಗಾ ಮಾತಾಜಿ ಸುಮ್ಮನೆ ಕೂರಲು ಇಷ್ಟಪಡಲಿಲ್ಲ. "ಪ್ರವಚನ ಬಿಟ್ಟರೆ ಉಳಿದಂತೆ ವಿಶ್ರಾಂತಿಯೊಂದೆ! ಪ್ರವಚನಕ್ಕೆ ಕಳಿಸಿರಿ" ಎಂದು ಆಗ್ರಹಿಸಿದರು. ಅದೇ ಸ್ಥಿತಿಯಲ್ಲೇ 48 ದಿವಸಗಳ ಕಾಲ ಪ್ರವಚನವನ್ನು ನಿರ್ವಹಿಸಿದರು.

ಚಾಮರಾಜನಗರ ಜಿಲ್ಲೆಯವರೇ ಆದ ಬಸವ ಧರ್ಮ ಪೀಠದ ಜಂಗಮ ಮೂರ್ತಿ ಪೂಜ್ಯ ಶ್ರೀ ಮಾದೇಶ್ವರ ಸ್ವಾಮಿಗಳು ಜಿಲ್ಲೆಯಾದ್ಯಂತ ಬಸವ ಕಲ್ಯಾಣದಲ್ಲಿ ಆಗುತ್ತಿರುವ 108 ಅಡಿ ಬಸವ ಮೂರ್ತಿಯ ನಿರ್ಮಾಣಕ್ಕಾಗಿ ದೇಣಿಗೆ ಸಂಗ್ರಹಿಸಲು ಸಂಚರಿಸಿದರು. ಪ್ರವಚನದ ಮುಕ್ತಾಯ ಸಮಾರಂಭವು ದೇವ(ಭಾನು)ವಾರ ದಿ.6-5-2012ರಂದು ಜರುಗಿತು. ವಿಶೇಷ ಆಹ್ವಾನಿತರಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಆಗಮಿಸಿದ್ದರು. ಶರಣ(ಶನಿ)ವಾರ ದಿ.5ರಂದು ಆಗಮಿಸಿ, ದಿ.5 ಮತ್ತು 6 ರಂದು ವಿಶೇಷ ಉಪನ್ಯಾಸ ನೀಡಿದರು. ದಿ.6 ರಂದು ಮಾತಾದ್ವಯರನ್ನು ಅಲಂಕರಿಸಿದ ಟ್ರ್ಯಾಕ್ಟರಿನಲ್ಲಿ ಹೂವಿನ ಪಲ್ಲಕ್ಕಿಯಲ್ಲಿ ಕೂರಿಸಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮಾದಾಪಟ್ಟಣದ ವಿರಕ್ತಮಠದ ಪೂಜ್ಯ ಶ್ರೀ ನಿ.ಪ್ರ.ತೋಂಟದಾರ್ಯ ಸ್ವಾಮಿಗಳು ಬಸವ ಧ್ವಜಾರೋಹಣ ಮಾಡಿದರು. ಕದಳಿ ವೇದಿಕೆಯ ಅಧ್ಯಕ್ಷೆ ಶರಣೆ ಮಾದಲಾಂಬಿಕೆಯವರು ಉದ್ಘಾಟಿಸಿದರು. 5000 ರೂ ಮತ್ತು ಹೆಚ್ಚಿನ ದೇಣಿಗೆ ಕೊಟ್ಟ ದಾನಿಗಳನ್ನು ಸತ್ಕರಿಸಲಾಯಿತು.

ಧಾರವಾಡದಲ್ಲಿ ಶರಣೋತ್ಸವ

ಧಾರವಾಡದ ಉಳವಿ ರಸ್ತೆಯಲ್ಲಿರುವ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ 42ನೆಯ ವಾರ್ಷಿಕೋತ್ಸವ ಮತ್ತು 3ನೆಯ ಶರಣೋತ್ಸವವು 2012ರ ಏಪ್ರಿಲ್ 28,29 ಮತ್ತು 30ರಂದು ನಡೆಯಿತು. 3ನೆಯ ಶರಣೋತ್ಸವವನ್ನು ಹುಬ್ಬಳ್ಳಿ-ಧಾರವಾಡ ಮಹಾನಗರದ ಉಪಮೇಯರ್ ಶರಣೆ. ಭಾರತಿ ಪಾಟೀಲ್ ಬೆಳಿಗ್ಗೆ 10-30ಕ್ಕೆ ಉದ್ಘಾಟಿಸಿದರು. ದಿ.28ರಂದು ಸಂಜೆ 4-30ರಿಂದ ಮಹಿಳಾಗೋಷ್ಠಿ, ದಿ.29ರಂದು ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ, ಸಂಜೆ 4-30ಕ್ಕೆ ಧರ್ಮಚಿಂತನಗೋಷ್ಠಿಯನ್ನು ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ॥ ಜೆ.ಎಸ್. ಪಾಟೀಲರು ಉದ್ಘಾಟಿಸಿ, ಉಪನ್ಯಾಸ ನೀಡಿದರು. ಹಾವೇರಿಯ ಡಾ॥ ರಾಜಣ್ಣ ವೈದ್ಯ ಅವರು ಬಸವ ಧ್ವಜಾರೋಹಣ ಮಾಡಿದರು. ಸೋಮವಾರ ದಿ.30ರಂದು ಬೆಳಿಗ್ಗೆ10-30 ರಿಂದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ. ಪೂಜ್ಯ ಗಂಗಾ ಮಾತಾಜಿ ಬಹುದೂರದ ಚಾಮರಾಜನಗರದಲ್ಲಿ ಇದ್ದುದರಿಂದಲೂ, ಕಾಲಿಗೆ ಪ್ಲ್ಯಾಸ್ಟರ್ ಹಾಕಿದ್ದರಿಂದಲೂ ಬರಲಾಗಲಿಲ್ಲ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರೇ ಪೀಠಾರೋಹಣ ಮಾಡಿದರು. ನಂತರ ಶ್ರೀ ಗುರು ಬಸವಣ್ಣ, ಅಕ್ಕಮಹಾದೇವಿಯವರ ಭಾವಚಿತ್ರಗಳ ಹಾಗೂ ಪೂಜ್ಯ ಮಾತೆಯವರ ಮೆರವಣಿಗೆ ನಡೆಯಿತು. ಉತ್ಸವದಲ್ಲಿ ಹಾಗೂ ಪಥಸಂಚಲನದಲ್ಲಿ ಸಾವಿರಾರು ಶರಣ ಶರಣೆಯರು ಬಿಳಿಯ ವಸ್ತ್ರಗಳನ್ನುಟ್ಟು ಕಾವಿಯ ಸ್ಕಾರ್ಫ್ ಹಾಕಿಕೊಂಡು ಭಾಗವಹಿಸಿದುದು, ಉತ್ಸಾಹದಿಂದ ನರ್ತಿಸುತ್ತಿದ್ದುದು ಮೆರವಣಿಗೆಯ ವಿಶೇಷ ಆಕರ್ಷಣೆಯಾಗಿತ್ತು. ವಿಶ್ವಗುರು ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರೊಂದಿಗೆ ಮೆರವಣಿಗೆ ಮುಕ್ತಾಯವಾಯಿತು. ಮೂರು ದಿನಗಳ ಪ್ರಸಾದ ವ್ಯವಸ್ಥೆ ಬಹಳ ಅಚ್ಚುಕಟ್ಟಾಗಿದ್ದು ಶರಣೋತ್ಸವ ಯಶಸ್ವಿಯಾಗಿ ಸಮಾರೋಪವಾಯಿತು.

ಮೇರು ಗಿರಿ ಮಾತಾಜಿ -ಭಾಗ 2

(ಏಪ್ರಿಲ್ ಸಂಚಿಕೆಯಿಂದ ಮುಂದುವರಿದಿದೆ) - ಲೀಲಾವತಿ ನಾಡಗೌಡರು

ಮಾತಾಜಿ, ತಮ್ಮ ಸಾಹಿತ್ಯ-ಸಂಗೀತದ ಬಗ್ಗೆ ನಾನು ಯಾವ ಶಬ್ದಗಳಿಂದ ನಿರೂಪಿಸಿದರೂ ಸಾಕೆನಿಸದು. ತಾವು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದಿರಿ. ಬಸವ ತತ್ತ್ವದ ತಿರುಳು, ಒಬ್ಬ ಸಾಮಾನ್ಯ ವ್ಯಕ್ತಿಗೂ ತಿಳಿಯುವಂತೆ ಬರೆದು ಆ ತತ್ತ್ವದ ಬೆಳಕು ಎಲ್ಲರ ಮನೆ ಮನ ಬೆಳಗುವಂತೆ ಮಾಡಿದಿರಿ. ಗುರು ಬಸವ ತಂದೆಯ ಬಹುಮುಖ ವ್ಯಕ್ತಿತ್ವವನ್ನು ತಮ್ಮ ಎಲ್ಲ ಗ್ರಂಥಗಳಲ್ಲಿ ತೆರೆದು ಇಟ್ಟಿರುವಿರಿ. 100ಕ್ಕಿಂತಲೂ ಹೆಚ್ಚು ಗ್ರಂಥಗಳು ತಮ್ಮಿಂದ ರಚನೆಯಾಗಿವೆ. ತಮ್ಮದು ಹರಿವ ನದಿಯಂತೆ ಹರಿವ ಸಾಹಿತ್ಯ. ತಮ್ಮ ಅಮೃತಹಸ್ತದಿಂದ ರಚನೆಗೊಂಡ ಮೊದಲ ಕಾದಂಬರಿ ಹೆಪ್ಪಿಟ್ಟಹಾಲು ಅದ್ಭುತ ರಚನೆ. ರಾಜ್ಯ ಪ್ರಶಸ್ತಿಗೆ ಆಯ್ಕೆಯಾಯಿತು. ನಂತರ ಬರೆದ 'ತರಂಗಿಣಿ' ಅಕ್ಕಮಹಾದೇವಿ ತಾಯಿಯವರನ್ನು ಕುರಿತು ಬರೆದ ಮಹಾನ್ ಕಾದಂಬರಿ. ಈ ಗ್ರಂಥಕ್ಕೆ ಬೇರೆ ಯಾವ ಹೋಲಿಕೆ ಕೊಡಲು ಸಾಧ್ಯ ? ಪ್ರತಿಯೊಬ್ಬರ ಜೀವನಕ್ಕೆ ಸಂದೇಶದಂತಿರುವ ಈ ಪುಸ್ತಕಕ್ಕೆ ನೊಬೆಲ್ ಪಾರಿತೋಷಕವೂ ಸಾಟಿಯಾಗಲಾರದು. ನೊಂದವರಿಗೆ, ಬೆಂದವರಿಗೆ ಆತ್ಮಬಲ ತುಂಬಿ ಬಾಳಲ್ಲಿ ಮುನ್ನಡೆಯುವಂತೆ ಮಾಡುವ ಪರುಷಮಣಿ ಈ ಕಾದಂಬರಿ. ಮಾತಾಜಿ ಕನ್ನಡ ಸಾಹಿತ್ಯದೇವಿಯ ಮಡಿಲ ತುಂಬಿದಿರಿ, ಬೆಡಗ ಹೆಚ್ಚಿಸಿದಿರಿ. ಭಾಷಾ ಸಂಪತ್ತನ್ನು ವೃದ್ಧಿಸಿದಿರಿ. ಶರಣ ಸಾಹಿತ್ಯ ಸಿರಿಗಂಧ ಹರಡಿದಿರಿ. ಆದ್ದರಿಂದ ಕನ್ನಡ ಸಾಹಿತ್ಯ ತಾಯಿಯೇ ತಮಗೆ ಋಣಿಯಾಗಿರಬೇಕು. ತಮ್ಮಿಂದ ರಚಿಸಲ್ಪಟ್ಟ ಪರಿಪೂರ್ಣ ಮಾನವ ಬಸವಣ್ಣ, ದೇವಪೂಜಾ ವಿಧಾನ, ಬಸವ ತತ್ತ್ವ ದರ್ಶನ, ಒಂದೊಂದು ಧ್ರುವ ತಾರೆಗಳಂತೆ ಮಿನುಗುತ್ತಿವೆ. ಅದ್ಭುತ ಸಾಹಿತ್ಯ ಸಾಮ್ರಾಜ್ಯ ನಿರ್ಮಿಸಿದ ತಮಗೆ ಗುರು ಬಸವಣ್ಣ ಸೃಷ್ಟಿಕರ್ತ ಲಿಂಗದೇವ, ಅದೆಂತಹ ಅಗಾಧ ಶಕ್ತಿ ನೀಡಿ ಕಳಿಸಿರಲಿಕ್ಕೆ ಸಾಕು! ಅನೇಕ ಸಾಹಿತ್ಯ ಕೃತಿಗಳು ಹಿಂದಿ, ಮರಾಠಿ, ತಮಿಳಿಗೆ ಭಾಷಾಂತರಗೊಂಡಿವೆ. ತಮ್ಮ ಜ್ಞಾನ ಜ್ಯೋತಿ ಇನ್ನೂ ಬೆಳಗಲಿ.

ತಾವು ಬರೆದ ಒಂದೊಂದು ಕವನಗಳೂ ಅಷ್ಟೇ ಪರಿಣಾಮಕಾರಿಯಾಗಿವೆ. ಗಣಗೀತೆ ಎಂಬ ಪುಸ್ತಕದಲ್ಲಿ ಬರೆದ ಎಲ್ಲ ಹಾಡುಗಳು ಅಷ್ಟೇ ಅರ್ಥಪೂರ್ಣವೂ, ಭಕ್ತಿ ಪ್ರಧಾನವೂ, ಜ್ಞಾನಯುಕ್ತವೂ ಆಗಿವೆ. ಮಗು ಹುಟ್ಟಿದಾಗಿನಿಂದ ಕೊನೆಕಾಲದವರೆಗಿನ ಅವಧಿಯಲ್ಲಿ ಬರುವ ಸಂದರ್ಭಗಳಿಗೆ ಅನುಗುಣವಾಗಿ ಹಾಡುಗಳು ನೈತಿಕ ಮೌಲ್ಯಗಳನ್ನು ಅಳವಡಿಸುವಂತಿವೆ. ಸಪ್ತಗಣಾಧೀಶ್ವರರ ಬಗ್ಗೆ ಬರೆದ ಹಾಡು, ಮಂಗಳಾರತಿ ಪದಗಳು ಅವರ ಜೀವನವನ್ನೇ ಚಿತ್ರಿಸುತ್ತವೆ. "ಜ್ಯೋತಿ ಬೆಳಗುತಿದೆ ಕಲ್ಯಾಣದ ಜ್ಯೋತಿ ಬೆಳಗುತಿದೆ" ಹಾಡು ಮನ ರೋಮಾಂಚನಗೊಳ್ಳುವಂತೆ ಮಾಡುತ್ತದೆ. ಕಲ್ಯಾಣ ಕರೆದಿದೆ ಕಲ್ಯಾಣ ಎಂಬ ಹಾಡಂತೂ ಭಾವ ತುಂಬಿಸುತ್ತದೆ. ಶರಣರ ಸ್ಮರಣೆ ಮಾಡಿಸುತ್ತದೆ. ಇನ್ನು, ಅಪ್ಪ ಬಸವಣ್ಣನವರ ಮೇಲೆ ತಾವು ಬರೆದ ಕವನಗಳು ಅಸಂಖ್ಯಾತ. ಅವರ ಜೀವನದ ಎಳೆ ಎಳೆ ಬಿಡಿಸುವ, ಅವರು ನಡೆದ ಪಥವನ್ನು ಬಿಂಬಿಸುವ, 'ಎಲ್ಲರಿಗೂ ಬೆಲ್ಲಾದ ಕಲ್ಯಾಣ ಬಸವಣ್ಣ' ರೂಪಕವು 12ನೆಯ ಶತಮಾನವನ್ನು ಕಣ್ಣೆದುರು ನಿಲ್ಲಿಸಿ ಮನಮುಗ್ನವಾಗುವಂತೆ ಮಾಡುತ್ತದೆ. ಕಣ್ಣೀರಧಾರೆ ಹರಿಸುತ್ತದೆ. ಹರಳಯ್ಯ, ಮಧುವಯ್ಯ, ಶೀಲವಂತರ ದಾರುಣ ಮರಣ, ಶರಣರ ವಧೆ ಇದೆಲ್ಲವನ್ನು ಜನಕೆ ತಿಳಿಸಿ ಹೆಣ್ಣಿಗಾಗಿ ಅಲ್ಲ, ಮಣ್ಣಿಗಾಗಿ ಅಲ್ಲ, ಸಮತಾ ತತ್ತ್ವಕ್ಕೋಸ್ಕರ ಕಲ್ಯಾಣದಲ್ಲಿ ಕ್ರಾಂತಿಯಾಯಿತೆಂದು ಬಿಂಬಿಸಿದಿರಿ.

'ಜಯ ಬಸವರಾಜ' ಬಸವ ಸ್ತುತಿ ಬರೆದು ಎಲ್ಲ ಸಂದರ್ಭಗಳಲ್ಲಿ ಪ್ರತಿಯೊಬ್ಬರೂ ಸ್ತುತಿಸುವಂತೆ ಮಾಡಿದಿರಿ. ಕ್ರಿಯಾಮೂರ್ತಿ ದೀಕ್ಷೆ ಪಡೆದ ನಾವೆಲ್ಲ ಯಾವ ಕಾರ್ಯಕ್ರಮ ನಡೆಸಲು ಹೋದರೂ ಪರಿಣಾಮಕಾರಿಯಾಗಿ, ಜ್ಞಾನಯುತವಾಗಿ ಮಾಡಿದಾಗ ಅವರು ಆಶ್ಚರ್ಯಗೊಳ್ಳುವಂತೆ ಆಗುತ್ತದೆ. ಅದ್ಭುತ ಶಕ್ತಿಯಾದ ಮಾತಾಜಿ ತಾವು ನೀಡಿದ ಜ್ಞಾನವನ್ನು, ಶರಣರು ಪಸರಿಸಲು ಅನುಕೂಲ ಮಾಡಿಕೊಟ್ಟರಿ. ಏಕದೇವ ಉಪಾಸನೆ ಜಾರಿಗೆ ತಂದು, ಎದೆಯ ಮೇಲೆ ಇಷ್ಟಲಿಂಗ ಜಗಲಿಯ ಮೇಲೆ ಗುರು ಬಸವಣ್ಣನವರನ್ನು ಗಟ್ಟಿಗೊಳಿಸಿದಿರಿ. ಈ ಕಾರ್ಯವನ್ನು ಯಾರಿಗಾದರೂ ಮಾಡಲು ಧೈರ್ಯವಿತ್ತೆ? ಆದ್ದರಿಂದಲೇ ಯಾರೂ ಮಾಡದ್ದನ್ನು ತಾವು ಮಾಡಿದಿರಿ.

ವಿವಾಹದ ಆಮಂತ್ರಣ ಪತ್ರಿಕೆಗಳು ಬಸವತತ್ತ್ವವನ್ನು ರೂಪಿಸುವ ಪತ್ರಿಕೆಗಳಾಗಿ ಮೂಡಿ ಬರುತ್ತಲಿವೆ. ಶರಣರು ಶರಣ ಪರಂಪರೆಯ ಪತ್ರಿಕೆ ಪ್ರಿಂಟ್ ಮಾಡಿಸಿ ಬಸವತತ್ತ್ವದ ಪ್ರಕಾರವೇ ಮದುವೆ, ಜವಳ, ಸೀಮಂತ, ಹುಟ್ಟುಹಬ್ಬ, ಲಿಂಗೈಕ್ಯ ಸಂಸ್ಮರಣಾ ಕಾರ್ಯಕ್ರಮ ನಿರಂತರ ನಡೆಯುವ ಪಥ ಹಾಕಿ ಕೊಟ್ಟಿರಿ. ಹರಿದು ಹಂಚಿ ಹೋಗಿದ್ದ, ಹಳಿ ತಪ್ಪಿದ ರೈಲಿನಂತೆ ಆಗಿದ್ದ ಲಿಂಗಾಯತ ಧರ್ಮಕ್ಕೆ ಸರ್ವಾಂಗ ಪರಿಪೂರ್ಣತೆ ಮರುಕಳಿಸುವಂತೆ ಮಾಡಿದಿರಿ.

12ನೆಯ ಶತಮಾನದಲ್ಲಿಯೇ ಪ್ರಜಾಪ್ರಭುತ್ವ ತತ್ತ್ವವನ್ನು ಜಾರಿಗೆ ತಂದ ಮಹಾ ಪ್ರವಾದಿ, ಮನುಕುಲೋದ್ಧಾರಕ ಗುರು ಬಸವಣ್ಣನವರನ್ನು ಪ್ರಪಂಚ ಅರಿಯಲಿ ಎಂದು, ಅವರ ಅಮೂಲ್ಯ ತತ್ತ್ವಗಳನ್ನು ತಿಳಿಯಲಿ ಎಂಬ ಮಹಾನ್ ಉದ್ದೇಶ ಹೊಂದಿ, ಕಾಯಕ ಮಾಡಿ ಭಕ್ತರು ಕೊಟ್ಟ ಹಣದಿಂದ ಬಸವ ಕಲ್ಯಾಣದಲ್ಲಿ 108 ಅಡಿ ಪುತ್ಥಳಿಯನ್ನು ಮಾಡಿಸುತ್ತಿರುವ ಕೆಚ್ಚೆದೆ ತಮ್ಮದು. ಮಾತಾಜಿ ತಾವು ಯಾರ ಹಂಗಿನಲ್ಲೂ ಇಲ್ಲದ ಸ್ವತಂತ್ರ ಧೀರರು ಎಂದು ಸ್ಪಷ್ಟಪಡಿಸಿದಿರಿ. ಸರಕಾರದ ಸಹಾಯಕ್ಕೆ ಕೈಯೊಡ್ಡಲಿಲ್ಲ. ಬೇಡಲು ಇಚ್ಛಿಸಲಿಲ್ಲ. ಭಕ್ತರ ಸಮೂಹವೇ ಬಹುದೊಡ್ಡ ಆಸ್ತಿ ಎಂದು ನಂಬಿ ನಡೆಯುತ್ತಿರುವ ತಾವು ಶರಣ ಸಮಾಜ ಕಟ್ಟಿ ತೋರಿಸಿದಿರಿ. ಗುರು ಬಸವಣ್ಣನವರನ್ನು ನಂಬಿ ನಡೆವ ತಾವು ಇಟ್ಟ ಪ್ರತಿ ಹೆಜ್ಜೆಯಲ್ಲಿ ಜಯ ಗಳಿಸುತ್ತಿರುವಿರಿ. ಬಸವ ಪುತ್ಥಳಿ ನಿರ್ಮಾಣ ತಾವು ನಿರ್ಮಿಸಿದ ಇತಿಹಾಸ. ಆ ದಿವ್ಯ ಮೂರ್ತಿ ಇದೇ ಅಕ್ಟೋಬರ್ ಕಲ್ಯಾಣ ಪರ್ವದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಬರೆಯಲು ಅತೀವ ಸಂತಸ ಎನಿಸುತ್ತದೆ.

ಲಿಂಗಾಯತ ಧರ್ಮದ ತಿರುಳನ್ನು ನಿರೂಪಿಸುವ 6 ಸೂತ್ರಗಳನ್ನು ನೀಡಿದಿರಿ. 866666–ಅಷ್ಟಾವರಣ, ಷಡಾಚಾರ, ಷಟ್‌ಸ್ಥಲ, ಷಟ್‌ಸೂತ್ರ, ಷಟ್‌ಶೀಲ, ಷಟ್‌ಕ್ರಿಯೆಗಳು ಈ ಸಂಜ್ಞೆಯ ಸಂಕೇತ.

ವಿಶ್ವವಿಭೂತಿ, ಸ್ತ್ರೀಕುಲೋದ್ಧಾರಕ, ಬಸವಣ್ಣನವರು ಸರ್ವ ಜನತೆಗೆ ಸಮಾನತೆ ಸಾರಿ ದಲಿತರನ್ನು ಅಪ್ಪ–ಬೊಪ್ಪ ಎಂದು ಕರೆದು ಇವನಾರವ ಇವನಾರವ ಎಂದೆನಿಸದೆ, ಇವನಮ್ಮವ ಇವನಮ್ಮವ ಎಂದು ನುಡಿದು ಆಚರಿಸಿದರು. ಜಾತಿ, ವರ್ಣ, ವರ್ಗ ಭೇದಗಳನ್ನು ಖಂಡಿಸಿದ ಎಲ್ಲ ಧರ್ಮಗಳ ಸಾರವನ್ನು ತನ್ನಲ್ಲಿ ಇಂಬಿಟ್ಟುಕೊಂಡ, ಸ್ವತಂತ್ರ ಧರ್ಮ, ಲಿಂಗಾಯತ ಧರ್ಮ ಈ ಧರ್ಮವು ಜಾತಿವಾದಿಗಳ ಕೈಯಲ್ಲಿ ಸಿಕ್ಕು ಜಾತಿಯಾಗಿ ಹಿಂದು ಧರ್ಮಕ್ಕೆ ಸೇರ್ಪಡೆಗೊಂಡಿದೆ ಈ ಬಂಧನದಿಂದ ಮುಕ್ತಮಾಡಿ ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ ಪಡೆಯಲು ಹೋರಾಟ ಪ್ರಾರಂಭಿಸಿದ್ದು ದೊಡ್ಡ ಸಾಹಸದ ಕೆಲಸ. ಇದಕ್ಕಾಗಿ ಕೇಂದ್ರ ಸರಕಾರದ ಸಂಪರ್ಕದಲ್ಲಿ ಇರಲು ದೇಶದ ರಾಜಧಾನಿ ದೆಹಲಿಯಲ್ಲಿ ಒಂದು ಬಸವ ಸ್ಮಾರಕವಿರಲಿ ಎಂದು ದೊಡ್ಡದಾದ ಬಸವ ಮಂಟಪ ಖರೀದಿಸಿದ್ದು ಸಾಮಾನ್ಯ ಮಾತಲ್ಲ.

ಬೇರೆ ಬೇರೆ ರಾಜ್ಯಗಳಲ್ಲಿ ಧರ್ಮ ಸಮ್ಮೇಳನ ನಡೆಸಿ ಯಶಸ್ವಿಯಾಗಿದ್ದು ಮಾತಾಜಿಯವರ ಹೆಗ್ಗಳಿಕೆ.

ಕ್ರೈಸ್ತ, ಮುಸ್ಲಿಂ ಬಾಂಧವರು ವಾರಕ್ಕೊಮ್ಮೆ ನಡೆಸುವ ಸಾಮೂಹಿಕ ಪ್ರಾರ್ಥನೆ ಪದ್ಧತಿಯಂತೆ ನಮ್ಮ ಧರ್ಮದಲ್ಲಿಯೂ ಶರಣರು ವಾರಕ್ಕೊಮ್ಮೆ ಪ್ರಾರ್ಥನೆಗೋಸ್ಕರ ಒಂದೆಡೆ ಸೇರಲಿ ಎಂದು ವಾರದ ಪ್ರಾರ್ಥನೆ ಜಾರಿಗೆ ತಂದರು. ತಾವೇ ಬರೆದ 'ಹೇ ಪರಮಾತ್ಮ' ಪ್ರಾರ್ಥನೆ ಮತ್ತು 'ಶರಣಜನ ಪೂಜಿತ ಶ್ರೀ ಲಿಂಗದೇವ' ಹಾಡು ನಿರಾಕಾರ ದೇವನನ್ನು ವರ್ಣಿಸುತ್ತವೆ. ಇದು ಕೂಡ ಇತಿಹಾಸ ನಿರ್ಮಾಣವೆ ! ಹಾಗೆಯೇ ಪ್ರತಿದಿನ ಸಂಜೆ ಎಲ್ಲರ ಮನೆಯಲ್ಲಿ ನಡೆಯಲು ಚಿಕ್ಕ ನೆನಹು ಎಂಬ ಪ್ರಾರ್ಥನಾ ಕಾರ್ಯಕ್ರಮ ರೂಪಿಸಿದಿರಿ.

ಅಪ್ಪಟ ಬಸವ ತತ್ತ್ವವನ್ನು ಅರಿತು ಆಚರಿಸುತ್ತರುವ ಏಕೈಕ ಧರ್ಮಪೀಠವೆಂದರೆ ಅದು ಬಸವಧರ್ಮಪೀಠ. ಈ ನಿಟ್ಟಿನಲ್ಲಿ ಮಠ ಪೀಠಗಳು ಬಸವ ತತ್ತ್ವಕ್ಕೆ ವಿರೋಧವಾಗಿ ಆಚರಣೆ ಗೈದಾಗ ತಮ್ಮ ಹರಿತವಾದ ಲೇಖನಿಯಿಂದ, ತಪ್ಪನ್ನು ತಿದ್ದಿಕೊಳ್ಳಲು ಅವಕಾಶ ಕೊಡುವಿರಿ. "ಸಮಸ್ಯೆ–ಸಮಾಧಾನ" ರೂಪದಲ್ಲಿ ಎಷ್ಟೋ ಶರಣರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿರುವಿರಿ. ಬಸವ ತತ್ತ್ವವನ್ನು ಎಳೆಎಳೆಯಾಗಿ ಬಿಡಿಸಿ ತಿಳಿಸುತ್ತಿರುವಿರಿ. ಇದಕ್ಕೆಲ್ಲ ಒಂದು ಮಾಧ್ಯಮ ಬೇಕಾಗಿತ್ತು. ಆಗ 1970ರಲ್ಲಿ

ಮೂಡಿ ಬಂದಿತು ಕಲ್ಯಾಣ ಕಿರಣ ಮಾಸ ಪತ್ರಿಕೆ. ಇಂದಿಗೂ ಈ ಪತ್ರಿಕೆ ಪ್ರಭಾವಶಾಲಿ ಮಾಧ್ಯಮವಾಗಿದೆ.

ಶರಣು ಶರಣಾರ್ಥಿ ಎಂಬ ಪವಿತ್ರ ಶಬ್ದಗಳು ಕಲ್ಯಾಣಕ್ರಾಂತಿಗೆ ಕಿಡಿಯಾದವು. ಈ ಶಬ್ದಗಳ ಬಳಕೆ ಮಾಸಿಹೋಗಿತ್ತು ಇಂದು ಎಲ್ಲರ ಬಾಯಲ್ಲಿ, ಫೋನಿನಲ್ಲಿ ಮಾತನಾಡುವಾಗ ಶರಣು ಶರಣಾರ್ಥಿ ಪದಗಳು ವ್ಯಾಪಕವಾಗಿ ಹರಡಿವೆ. ಇದಕ್ಕೆಲ್ಲ ಕಾರಣ ಪೂಜ್ಯ ಮಾತಾಜಿಯವರು.

2001ನೇ ಇಸ್ವಿಯಲ್ಲಿ ನಡೆದ ಗಣತಿಯಲ್ಲಿ ಹಾಗೂ 2011ರಲ್ಲಿ ನಡೆದ ಜನಗಣತಿ ಸಮಯದಲ್ಲಿ ಲಿಂಗಾಯತ ಎಂದೇ ಬರೆಸಿರಿ ಎಂದು ಸಾರಿ ಸಾರಿ ಹೇಳಿದಿರಿ. ಅನೇಕ ಕಡೆ ಸುತ್ತಿ ಸುತ್ತಿ ಸಭೆ ಸಮಾರಂಭ ನಡೆಸಿ ಲಿಂಗಾಯತ ಎಂದು ಬರೆಸಲು ಅರಿವು ನೀಡಿದಿರಿ. ನಿಮಗಿದ್ದ ಕಳಕಳಿ ಎಲ್ಲ ಮಠಾಧೀಶರಲ್ಲಿ ಇದ್ದಿದ್ದರೆ, ಇಷ್ಟು ಹೊತ್ತಿಗೆ ನಮ್ಮ ಲಿಂಗಾಯತ ಧರ್ಮ ಜಗತ್ತಿನ 6 ಧರ್ಮಗಳ ಸಾಲಿನಲ್ಲಿ 7ನೆಯ ಸ್ವತಂತ್ರ ಧರ್ಮವೆಂದು ಘೋಷಿಸಲ್ಪಡುತ್ತಿತ್ತು. ಈ ಧರ್ಮದ ಮಾನ್ಯತೆಗಾಗಿ ಇನ್ನೂ ತಮ್ಮ ಹೋರಾಟ ತೀವ್ರಗತಿಯಲ್ಲಿ ನಡೆಯಬೇಕಾಗಿದೆ. ಲಿಂಗಾಯತ ಧರ್ಮಕ್ಕೆ ಒಂದು ಧರ್ಮಗ್ರಂಥ ಬೇಕಲ್ಲವೆ ? ವಚನ ಸಾಹಿತ್ಯವೇ ಧರ್ಮಗ್ರಂಥ. ಈ ಗ್ರಂಥವು ಸರ್ವಾಂಗ ಪರಿಪೂರ್ಣವಾಗಿ ಆಗಬೇಕಲ್ಲ ? ಬೈಬಲ್ ಕುರಾನ್‌ಗಳ ತರಹ ಎಲ್ಲವನ್ನೂ ಒಳಗೊಂಡ ಗ್ರಂಥವಾಗಿ ಸಿದ್ಧಪಡಿಸಲು ಹಗಲಿರುಳು ಶ್ರಮಿಸುತ್ತಿರುವಿರಿ. ಹೀಗಾಗಿ ವಿಶೇಷವಾದ ಧರ್ಮಗ್ರಂಥ ತಮ್ಮ ಅಮೃತ ಹಸ್ತದಿಂದ ನಿರ್ಮಾಣಗೊಳ್ಳುತ್ತಲಿದೆ. ಇದು ಆಗಬೇಕೆಂದು ಅಪ್ಪಾಜಿಯವರ ಮಹಾನ್ ಸಂಕಲ್ಪವಿತ್ತು. ಶರಣರ ಸಂಕಲ್ಪವೂ ಅದೇ ಆಗಿದೆ. ಬೇಗ ಧರ್ಮಗ್ರಂಥ ಹೊರಬರಲಿ ಎಂದು ಸೃಷ್ಟಿಕರ್ತ ಲಿಂಗದೇವ, ಅಪ್ಪ ಬಸವಣ್ಣನವರಲ್ಲಿ ಪ್ರಾರ್ಥಿಸುತ್ತೇವೆ.

ಧರ್ಮಕರ್ತ ಗುರುಬಸವನ ಕೀರ್ತಿ ಬಾನಿನೆತ್ತರಕೆ ಏರಿಸುವ ನಿಟ್ಟಿನಲ್ಲಿ. ತಾವು ವಿದೇಶಗಳಿಗೆ ಹೋಗಿ (ಅಮೇರಿಕಾ, ಕೆನಡಾ, ಇಂಗ್ಲೆಂಡ್) ಬಸವ ತತ್ತ್ವ ಪ್ರಚಾರ ಮಾಡಿ ಬಂದಿರಿ.

ಯಾವುದೋ ಪೂಜೆ ಮಾಡುತ್ತಾ ಮೌಢ್ಯತೆಯಲ್ಲಿ ಇದ್ದ ಜನಕ್ಕೆ ಲಿಂಗಾಯತ ಧರ್ಮದ ತಿರುಳು ತಿಳಿಸಿ, ಗುರುಬಸವೇಶ್ವರ ಪೂಜಾವ್ರತ ಮಾಡಲು ಅನುಕೂಲವಾಗುವಂತಹ ಅಮೂಲ್ಯ ಪುಸ್ತಕ 'ಶ್ರೀ ಬಸವೇಶ್ವರ ಪೂಜಾವ್ರತ' ಪುಸ್ತಕ ಬರೆದು ಜನತೆಗೆ ನೀಡಿದಿರಿ.

ಮಣ್ಣು ತಿನ್ನುವುದನ್ನು ಬಿಡಿಸಿ ಹಣ್ಣು ತಿನ್ನುವುದನ್ನು ಕಲಿಸಿದಿರಿ. ಯಾವುದೇ ಕಾರ್ಯಕ್ಕೆ ಮುನ್ನ ಮದುವೆ, ಜವಳ, ಗೃಹಪ್ರವೇಶ, ಹುಟ್ಟುಹಬ್ಬ, ಲಿಂಗೈಕ್ಯ ಸ್ಮರಣೆ, ಗುರುಬಸವಣ್ಣನವರ ಪೂಜೆ ಮಾಡಿ ಪ್ರಾರಂಭಿಸುವ ಶರಣ ಸಂಸ್ಕೃತಿಯನ್ನು ಜಾರಿಗೆ ತಂದಿರಿ.

ಮಡಿವಾಳ ಮಾಚಿದೇವರ ವಾಣಿ ಹೀಗೆ ಹೇಳುತ್ತದೆ :

ಸುಖ ಒಂದು ಕೋಟಿ ಬಂದಲ್ಲಿ ಬಸವಣ್ಣನ ನೆನೆವುದು
ದುಃಖ ಒಂದು ಕೋಟಿ ಬಂದಲ್ಲಿ ಬಸವಣ್ಣನ ನೆನೆವುದು

ಯಾವುದೇ ಸಂದರ್ಭವಾಗಲಿ ಗುರುಪೂಜೆಯಿಂದಲೇ ಪ್ರಾರಂಭ. ಶರಣ ಮೇಳದಲ್ಲಿ ಪ್ರತಿವರ್ಷ, ಅಪ್ಪ ಬಸವಣ್ಣನ ಕ್ಯಾಲೆಂಡರ್ ಅಲ್ಲದೇ, ಶರಣರ ಭಾವಚಿತ್ರವಿರುವ ಜೇಬಿನ ಆವೃತ್ತಿಯ ಸಣ್ಣ ಕ್ಯಾಲೆಂಡರ್ ಹೊರಡಿಸಿ ಶರಣರನ್ನು ಪರಿಚಯಿಸುತ್ತಿರುವಿರಿ. ಕ್ರಿಯಾಮೂರ್ತಿಗಳನ್ನು ರೂಪಿಸಿ ಧರ್ಮಪ್ರಚಾರಕ್ಕೆ ಅಣಿಗೊಳಿಸುತ್ತಿರುವಿರಿ. ಸಾವಿರಾರು ಸಾಧಕ ಸಾಧಕಿಯರನ್ನು ತರಬೇತುಗೊಳಿಸಿರುವಿರಿ.

ಕೂಡಲ ಸಂಗಮ ಬಸವಕಲ್ಯಾಣಗಳು ಅಂತರರಾಷ್ಟ್ರೀಯ ಮಟ್ಟಕ್ಕೆ ಬರಲು ಕಾರಣಕರ್ತರಾದ ತಾವು ಮೈಸೂರು ರಸ್ತೆಯ ಕುಂಬಳಗೋಡು ಹತ್ತಿರ ಬಸವ ಗಂಗೋತ್ರಿ ಆಶ್ರಮವನ್ನು ನಿರ್ಮಿಸಿ ಅಲ್ಲಿ ಅನಾಥಾಶ್ರಮ, ವೃದ್ಧಾಶ್ರಮ ನಡೆಯುವಂತೆ, ಕಲ್ಯಾಣ ಮಂಟಪ ರೂಪಿಸಿ ಬಡವರಿಗೂ ನಿಲುಕುವ ಖರ್ಚಿನಲ್ಲಿ ಮದುವೆಗಳು ನಡೆಯುವಂತೆ ಮಾಡಿಸಿದಿರಿ. ಈ ಬೃಹತ್ ಜಾಗದಲ್ಲಿ ಗುರು ಬಸವಣ್ಣನವರ ಸ್ಮಾರಕ ಮಾಡಲು ಗುರಿ ಇಟ್ಟುಕೊಂಡಿರುವಿರಿ. ತಮ್ಮ ಅಮೂಲ್ಯ ಜೀವನದ ಪ್ರತಿಕ್ಷಣಗಳು ಬಸವ ಸೇವೆಗೆ ಅರ್ಪಣೆಯಾಗುತ್ತಲಿವೆ.

ಪೂಜ್ಯ ಲಿಂಗಾನಂದ ಅಪ್ಪಾಜಿಯವರು, ತಾವು ನಿರಂತರ ಊರಿಂದೂರಿಗೆ ಹೋಗಿ ಪ್ರವಚನ ಕಾಯಕ ಮಾಡಿದಿರಿ. ಇದೇ ಪರಂಪರೆ ಮುಂದುವರೆಸಿಕೊಂಡು ಬರಲು ಅನೇಕ ಜಂಗಮಮೂರ್ತಿಗಳನ್ನು ರೂಪಿಸಿದಿರಿ. ಸದ್ಯ ಪೂಜ್ಯ ಗಂಗಾಮಾತಾಜಿಯವರು ಒಂದು ದಿನವೂ ಬಿಡುವಿಲ್ಲದೇ 12 ತಿಂಗಳೂ ಪ್ರವಚನದಲ್ಲಿ ತೊಡಗಿರುತ್ತಾರೆ. ಅದೆಷ್ಟೋ ಶರಣರು ತಮ್ಮ ಪ್ರಸಾದವಾಣಿ ಕೇಳಿ ಸಾಹಿತಿ, ಕವಿಗಳಾಗಿ ರೂಪುಗೊಂಡಿದ್ದಾರೆ. ಆದ್ದರಿಂದ ತಾವು ಬೆಳೆಯುತ್ತ, ಶರಣರನ್ನು ಆ ಎತ್ತರಕ್ಕೆ ಹೋಗಲು ಪ್ರೇರಣೆ ನೀಡುತ್ತಿರುವಿರಿ.

ಮಹಾರಾಷ್ಟ್ರದ ಈಚಲಕರಂಜಿಯ ಹತ್ತಿರವಿರುವ ಅಲ್ಲಮಗಿರಿಯಲ್ಲಿ ಪ್ರತಿವರ್ಷ ಲಿಂಗಾಯತ ಗಣಮೇಳ ನಡೆಸಲು ದಿಟ್ಟ ಹೆಜ್ಜೆ ಇಟ್ಟಿರಿ. ಲಿಂಗಾಯತ ಧರ್ಮದವರಿದ್ದೂ ಗುರುಬಸವಣ್ಣನವರ ಬಗ್ಗೆ ಅರಿಯದ ಮುಗ್ಧ ಜನತೆಗೆ ಧರ್ಮದ ತಳಹದಿ ಹಾಕಿ, ಬಸವಣ್ಣನವರನ್ನು ಜನರ ಹೃದಯಪೀಠದಲ್ಲಿ ನೆಲೆಗೊಳಿಸಿದಿರಿ. ಅಸಾಧ್ಯವಾದುದನ್ನು ಸಾಧ್ಯ ಮಾಡುವುದು ತಮ್ಮ ದಿಟ್ಟ ಹೆಜ್ಜೆಗಳಲ್ಲದೇ ಇನ್ನೇನು ? ತಾವು ಮಾಡಿದ ಮಾಡುತ್ತಿರುವ ಸಾಧನೆಗಳಿಗೆ ಬೇರೆ ಸಾಟಿ ಉಂಟೆ ? ಬಹುದೊಡ್ಡ ತಾಪತ್ರಯಗಳಲ್ಲಿ ಹಣದ ಕೊರತೆಯನ್ನು ನೀಗಿಸುತ್ತ ಛಲಗಾರ ಯೋಧನಂತೆ, ಸತ್ಯವೆಂಬ ಖಡ್ಗವಿಡಿದು ತಮ್ಮ ಅಧ್ಯಾತ್ಮಿಕ ಪಥದಲ್ಲಿ, ಧಾರ್ಮಿಕ ಪಥದಲ್ಲಿ, ಸಾಮಾಜಿಕ ಸುಧಾರಣೆಗಾಗಿ ಮುನ್ನುಗ್ಗಿ ಸಾಧನೆಗೈಯುತ್ತಿರುವಿರಿ.

ಚಂದನವ ಕಡಿದು ಕೊರೆದರೂ ಕಂಪು ಸೂಸುವ ಪರಿಯಲಿ
ಬೆಟ್ಟದಷ್ಟು ಕಷ್ಟ ಸಹಿಸಿ ಜನಸೇವೆಗೈಯುತ್ತಿರುವಿರಿ
ಮಾತಾಜಿ ತಾವೊಂದು ಮೇರುಗಿರಿ, ಮಂದಾರಗಿರಿ
ತಾವೊಂದು ವ್ಯಕ್ತಿಯಲ್ಲ ಶಕ್ತಿ
ತಾವು ಕಾಯಕಯೋಗಿ ಜ್ಞಾನದಾಸೋಹಿ,
ಅಕ್ಕನ ಅವತಾರಿಣಿ, ಅರಿಷಡ್ವರ್ಗಗಳನ್ನು ಗೆದ್ದ ಅನುಭಾವಿ
ಶರಣಧರ್ಮ ರಕ್ಷಣೆಗೆ ಧರೆಗಿಳಿದು ಬಂದಿರಿ
ವಚನಗಳನ್ನೇ ಹಾಸಿಕೊಂಡು ವಚನಗಳನ್ನೇ ಹೊದ್ದುಕೊಂಡು
ಬಸವನಾಮವ ಉಸಿರಾಗಿಸಿಕೊಂಡು, ನಮ್ಮೆಲ್ಲರ
ಮಧ್ಯದಲ್ಲಿ ತಾವಿರುವಿರಲ್ಲ, ನಾವು ಧನ್ಯರು.
ನಿಮ್ಮ ಹಾಡಿ ಹೊಗಳಲು ಶಬ್ದ ನನಗೆ ಸಾಲವು
ನಿಮ್ಮ ನಡೆ ನುಡಿಗಳೇ ನಮಗೆ ದಾರಿ ದೀಪವು
ನಮ್ಮಗಳ ಆಯುಷ್ಯವನ್ನು ತಮಗೆ ನೀಡಿ
ಸೃಷ್ಟಿಕರ್ತ ಲಿಂಗದೇವ ಮಂತ್ರಪುರುಷ ಬಸವಣ್ಣ
ತಮ್ಮಿಂದ ಇನ್ನೂ ಉನ್ನತ ಕಾರ್ಯ ಮಾಡಿಸಿಕೊಳ್ಳಲಿ
ಎಂದು ಹಾರೈಸಿ ಬರವಣಿಗೆಗೆ ವಿರಾಮಕೊಡುವೆ. *****

ಜೂನ್ ಸಂಚಿಕೆಯಿಂದ ಆಜೀವ ಸದಸ್ಯತ್ವ ರದ್ದು ಪಡಿಸಲಾಗಿದೆ.

ಕಲ್ಯಾಣಕಿರಣ ಓದುಗ ಶರಣ ಬಂಧುಗಳಲ್ಲಿ ಮನವಿ. ಕಲ್ಯಾಣ ಕಿರಣದ ಮುದ್ರಣ ವೆಚ್ಚ ದುಬಾರಿಯಾಗಿದ್ದು ಸದಸ್ಯರು ನವೀಕರಿಸದೆ ಇರುವ ಕಾರಣ ಪತ್ರಿಕೆ ನಡೆಸಲು ಕಷ್ಟವಾಗುತ್ತಿದೆ. ಅನೇಕರಿಗೆ 40 ವರ್ಷಗಳಿಂದ ಪತ್ರಿಕೆ ಹೋಗುತ್ತಿದೆ. ಕೆಲವರು ಲಿಂಗೈಕ್ಯರಾಗಿದ್ದರೂ ಬಂಧುಗಳು ತಿಳಿಸುತ್ತಿಲ್ಲ ಮತ್ತು ವಿಳಾಸ ಬದಲಾದವರು ಅನೇಕರು ಬದಲಾದ ವಿಳಾಸ ತಿಳಿಸದೆ ಅದೇ ವಿಳಾಸಕ್ಕೆ ಪತ್ರಿಕೆ ಹೋಗುತ್ತಿರುತ್ತದೆ. ಈ ಎಲ್ಲ ಕಾರಣಗಳಿಂದಾಗಿ ಕಲ್ಯಾಣ ಕಿರಣದ ಆಜೀವ ಸದಸ್ಯತ್ವ ರದ್ದುಮಾಡಿ ವಾರ್ಷಿಕ ಮತ್ತು ಪಂಚವಾರ್ಷಿಕ ಸದಸ್ಯತ್ವ ಮಾತ್ರ ಇಡಲಾಗಿದೆ.

ಈಗ 2008 ರ ಮುಂಚೆ ಆಜೀವ ಸದಸ್ಯರಾದವರೆಲ್ಲರೂ ತಮ್ಮ ಚಂದಾವನ್ನು ವಾರ್ಷಿಕ ಅಥವಾ ಪಂಚವಾರ್ಷಿಕಕ್ಕೆ ನವೀಕರಿಸಿಕೊಳ್ಳಬೇಕು. 2008ರ ನಂತರ ಅಜೀವ ಸದಸ್ಯರಾದವರಿಗೆ ಅಲ್ಲಿಂದ 5 ವರ್ಷಗಳು ಲೆಕ್ಕ ಹಾಕಿ ಪತ್ರಿಕೆ ಕಳಿಸಲಾಗುವುದು.

ಶರಣ ಬಂಧುಗಳು ಸಹಕರಿಸಬೇಕಾಗಿ ವಿನಂತಿ.

ನೆನಪಿನ ಬುತ್ತಿ ಬಿಚ್ಚಿದಾಗ – 9

ಬಸವ ಕಲ್ಯಾಣದ ಸಂದರ್ಶನದ ನಂತರ ಕೆಲವು ಶರಣರ ಕ್ಷೇತ್ರ ದರ್ಶನ ಮಾಡಿ ಕೂಡಲಸಂಗಮದಲ್ಲಿ ಸರ್ಕಾರದ ವತಿಯಿಂದ ಏರ್ಪಡಿಸಿದ್ದ ಸಮಾರಂಭದಲ್ಲಿ ಭಾಗವಹಿಸಲು ಭಕ್ತರೊಡನೆ ಹೋದೆವು. ಈಗಾಗಲೇ ಸಭೆಯಲ್ಲಿ ಪರಿಚಯವಾದುದರಿಂದ ಜನಾಗ್ರಹವೂ ಜಾಸ್ತಿಯಾಯಿತು. ಜನವರಿ 2, 1968ರಂದು ಮಹಿಳಾಗೋಷ್ಠಿಯಲ್ಲಿ ನನ್ನ ಕಾರ್ಯಕ್ರಮಕ್ಕೆ ಅವಕಾಶ ಸಿಕ್ಕಿತು. 'ಓಂ' ಎಂದು ಪ್ರಾರಂಭ ಮಾಡುತ್ತಲೇ ಸಭೆಯಲ್ಲಿ ನೀರವ ಮೌನ, ಉತ್ಸಾಹ, ಕುತೂಹಲ. ನನ್ನ ಭಾಷಣ ಕೇಳಿ ಜನರು ಆನಂದ ತುಂದಿಲರಾದರು. "ಕೂಡಲ ಸಂಗಮದ ಕಾರ್ಯಕ್ರಮದಲ್ಲಿ ಮರೆಯಲಾಗದ ವ್ಯಕ್ತಿ ಎಳೆ ವಯಸ್ಸಿನ ಮಾತೆ ಮಹಾದೇವಿ" ಎಂದು ಎಲ್ಲರೂ ಉದ್ಗರಿಸುವವರೆ ! ಆಕಸ್ಮಿಕವಾಗಿ ಭೇಟಿಯಾದರೆ ಇಂದಿಗೂ ಬಿಜಾಪುರ, ಬಾಗಲಕೋಟೆ ಜಿಲ್ಲೆಗಳ ಜನ ಅಂದು ಭಾಷಣ ಕೇಳಿದ್ದು ನೆನಪಿಸಿಕೊಳ್ಳುತ್ತಾರೆ. ಬಸವ ಕಲ್ಯಾಣ, ಕೂಡಲ ಸಂಗಮ ನಂತರ ಆದ ಬಸವನ ಬಾಗೇವಾಡಿ ಕಾರ್ಯಕ್ರಮಗಳು ಬಹಳ ಪ್ರಸಿದ್ಧಿಯನ್ನು ತಂದುಕೊಟ್ಟವು.

ಅಕ್ಕಮಹಾದೇವಿ ಆಶ್ರಮ ಪ್ರಾರಂಭ

ಧಾರವಾಡ ನಗರದ ಉಳವಿ ರಸ್ತೆಯ ರೇಲ್ವೆ ಗೇಟ್ ಬಳಿ ಸುಮಾರು ಆರು ಎಕರೆ ಜಾಗವನ್ನು ಖರೀದಿಸಿ ಆಶ್ರಮ ಕಟ್ಟಡವನ್ನು ಕಟ್ಟಲು ಆರಂಭಿಸಲಾಗಿತ್ತು. ಕಟ್ಟಡವು ಪೂರ್ತಿಗೊಂಡ ಕಾರಣ 1968 ಏಪ್ರಿಲ್ 13, ದವನದ ಹುಣ್ಣಿಮೆ ಅಕ್ಕಮಹಾದೇವಿ ಜಯಂತಿಯಂದು ಜಗನ್ಮಾತಾ ಅಕ್ಕಮಹಾದೇವಿ ಆಶ್ರಮವನ್ನು ಉದ್ಘಾಟಿಸಲಾಯಿತು. ಕಾಕತಾಳೀಯ ನ್ಯಾಯವೆಂಬಂತೆ ಅಂದು ಉಡುತಡಿಯಲ್ಲಿ ಬಸವ ಸಮಿತಿಯವರು ಅಕ್ಕಮಹಾದೇವಿಯ 800ನೆಯ ಜಯಂತಿ ಉತ್ಸವವನ್ನು ಆಚರಿಸುತ್ತಿದ್ದರು. ಸಾಮೂಹಿಕ ಇಷ್ಟಲಿಂಗಪೂಜೆ ಮಾಡಿ ಪೂಜ್ಯ ಗುರುಗಳ ಪಾದಪೂಜೆಯನ್ನು ಮಾಡಿ ಕಟ್ಟಡವನ್ನು ಉದ್ಘಾಟಿಸಿ ಅನ್ನದಾಸೋಹ ಏರ್ಪಡಿಸಲಾಗಿತ್ತು.

ಬಸವನ ಬಾಗೇವಾಡಿಯಲ್ಲಿ ಸರ್ಕಾರದಿಂದ ಪ್ರಾಯೋಜಿತವಾದ ಅಷ್ಟಶತಮಾನೋತ್ಸವ ಕಾರ್ಯಕ್ರಮ ನಡೆಯಲಿದ್ದು ಅದಕ್ಕೆ ಅಧಿಕೃತ ಆಮಂತ್ರಣ ಬಂದಿತು. (ಬಸವ ಕಲ್ಯಾಣ, ಕೂಡಲ ಸಂಗಮದಲ್ಲಿ ಆಕಸ್ಮಿಕವಾಗಿ ಅವಕಾಶ ದೊರಕಿತ್ತು) ಆಹ್ವಾನಿಸಲು ಬಂದವರಿಗೆ ಕೆಲವು ಕರಾರು ಹಾಕಿದೆ. ಮಹಿಳಾಗೋಷ್ಠಿಯಲ್ಲಿ ನನ್ನ ಹೆಸರು ಬೇಡ, ಬೇರೆ ಗೋಷ್ಠಿಯಲ್ಲಿ ಹಾಕಬೇಕು ಮತ್ತು ಸಮಯವನ್ನು 5 ನಿಮಿಷ, 10 ನಿಮಿಷ ಎಂದು ನಿಗದಿಪಡಿಸಬಾರದು. "ನಿಮ್ಮ ಕಾರ್ಯಕ್ರಮವನ್ನು ಮುದ್ದಾಂ ಇಟ್ಟುಕೊಳ್ಳಲೆಂದೇ ಆಹ್ವಾನಿಸುತ್ತಿದ್ದೇವೆ. ನಿಮ್ಮ ಕರಾರಿಗೆ ಒಪ್ಪಿಗೆ" ಎಂದು ಆಹ್ವಾನಿಸಲು ಬಂದವರು ಹೇಳಿದರು. ಮಹಿಳಾ ಗೋಷ್ಠಿಯಲ್ಲಿ ಮತ್ಸರ ಮಾಡುವವರೇ ಬಹಳ.

ಬಸವನ ಬಾಗೇವಾಡಿ ರೋಡ್ ರೇಲ್ವೆ ಸ್ಟೇಷನ್(ತೆಲಗಿ)ವರೆಗೆ ರೈಲಿನಲ್ಲಿ ಹೋದೆ. ರಾತ್ರಿ ಸುಮಾರು ಒಂದು ಗಂಟೆಯಾಗಿತ್ತು. ತಹಸೀಲ್ದಾರರವರು ಜೀಪ್ ತೆಗೆದುಕೊಂಡು ಕರೆಯಲು ಬಂದಿದ್ದರು. ನಮ್ಮ ವಾಸ್ತವ್ಯಕ್ಕಾಗಿ ಪ್ರವಾಸಿ ಮಂದಿರಕ್ಕೆ ಕರೆದೊಯ್ದು ಬಾಗಿಲನ್ನು ಬಡಿದು, "ಬಾಗಿಲು ತೆಗೆಯಿರಿ; ಮಾತೆ ಮಹಾದೇವಿಯವರು ಬಂದಿದ್ದಾರೆ" ಎಂದು ಹೇಳಿದರು. ಅಲ್ಲಿಯ ತನಕ ಮಾತನಾಡುತ್ತಲಿದ್ದ ಮಹಿಳಾ ಮಣಿಗಳು (ಪ್ರಮುಖ ಸಾಹಿತಿಗಳು, ರಾಜಕಾರಣಿಗಳು ಆದ ಮಹಿಳೆಯರಿದ್ದರು) ಸ್ತಬ್ಧರಾದರು. ಬಾಗಿಲು ತೆಗೆಯಲೇ ಇಲ್ಲ. ರಾತ್ರಿ ಎರಡು ಗಂಟೆ ಹೊತ್ತು. "ನೋಡಿ ಎಂಥಾ ಜನ ! ಇವರೆಲ್ಲ ಬಸವಣ್ಣನ ತತ್ತ್ವದ ಬಗ್ಗೆ ಭಾಷಣ ಮಾಡುವವರು." ಎನ್ನುತ್ತಾ ಅಲ್ಲೇ ಪಕ್ಕದಲ್ಲಿದ್ದ ಇನ್ನೂ ಉದ್ಘಾಟನೆಯಾಗಬೇಕಾಗಿದ್ದ ಐ.ಬಿ.(ಪ್ರವಾಸಿಮಂದಿರ)ಯ ಕೀಲಿ ತೆಗೆಸಿದರು. ಬಸವಣ್ಣನ ಲೀಲೆ ! ಆ ಕಡೆ ರೂಮಿನಲ್ಲಿ ಸಿಕ್ಕಾಪಟ್ಟೆ ಜನರು, ಇಲ್ಲಿ ನಾನು ಮತ್ತು ನಮ್ಮ ಸಂಗಡಿಗರು ಮಾತ್ರ . ನಾವಿರುವುದು ಅತ್ಯುತ್ತಮ ವ್ಯವಸ್ಥೆಯ ಐ.ಬಿ. ಮತ್ತೊಂದು ಸ್ವಾರಸ್ಯಕರ ಪ್ರಸಂಗವೆಂದರೆ ಅಲ್ಲಿ ನೀರು ನಿಂತು ಹೋಗಿ ಬೆಳಿಗ್ಗೆ ಅವರೆಲ್ಲ ಇಲ್ಲಿಗೆ ಬಂದು ವಿನಂತಿಸಿಕೊಂಡು ಶೌಚ, ಸ್ನಾನಗಳನ್ನು ಪೂರೈಸಿಕೊಳ್ಳುವಂತೆ ಆದುದು.

ದಿ.29-04-1968, ಹಲ್ಯಾಳದ ಪೂಜ್ಯ ಶ್ರೀ ನಿ.ಪ್ರ.ಶಂಭುಲಿಂಗ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ. ಕಾರ್ಮೋಡವು ಕವಿದು ಮಿಂಚು ಗುಡುಗು ಪ್ರಾರಂಭವಾಯಿತು. ವಿಪರೀತ ಜನರು ಸೇರಿದ್ದಾರೆ. ಆಗ ನಾನು ನನ್ನ ಡಯರಿಯಲ್ಲಿ ಒಂದು ಪದ್ಯವನ್ನು ಭಕ್ತಿ ಪರವಶತೆಯಿಂದ ಬರೆದೆ.

ಬಸವ ಪ್ರಭುವಿನಲ್ಲಿ ಪ್ರಾರ್ಥನೆ

ನಿಲ್ಲಿಸಲೇ ಹೇ ತಂದೆ ನಿನ್ನ ಘನ ಆರ್ಭಟವ
ಸಲ್ಲಿಸಲೆ ಓ ತಂದೆ, ನಿಮ್ಮ ಮಕ್ಕಳ ಬಯಕೆ ॥

ತತ್ತ್ವ ಕೇಳಲಿಕೆಂದು ಮಕ್ಕಳಿಂದು ಕೂತಿರಲು
ಎತ್ತಣೆಂದೋ ಬಂದು ಆರ್ಭಟಿಪೆ ಏಕೆ ? ॥

ಅಪಚಾರವೇನಾಯ್ತು ಕುಪಿತನಾದುದು ಏಕೆ?
ತಪ್ಪೆಮ್ಮದು ಕ್ಷಮೆ ನಿನ್ನದು ಕಾರುಣ್ಯನಿಧಿಯೆ ॥

ಗುಡುಗಿನಿಂ ಆರ್ಭಟಿಸಿ ಮಿಂಚೀಗ ಸಂಚಳಿಸಿ
ನಡುಗಿಸುತ ಶ್ರೋತೃಗಳ ಕಾಡಿಸುವೆ ಏಕೆ ?

ಕಾರುಣ್ಯ ನಿಧಿ ನೀನು, ಕಲ್ಪತರುವೂ ನೀನು
ಸರ್ವಜೀವರ ಬಯಕೆ, ನಿನಗೆ ಸಂದಿಹುದು ॥

ಶಾಂತನಾಗೌ ದೇವಾ ಎಮ್ಮ ಭೀತಿಯ ತೊಡೆದು
ಚಿಂತಿಸುವ ಹೃದಯಕ್ಕೆ ಅಮೃತವ ಸೇಚಿಸುತ ॥

ಜಯಜಯತು ಹೇ ಬಸವ ಜಯ ಬಸವರಾಜ
ಬಯಕೆ ಸಲ್ಲಿಸು ತಂದೆ ಸಚ್ಚಿದಾನಂದಾ ಕಂದ ॥

ಪರವಾನಗಿ ಪಡೆದು ಮೈಕಿನಲ್ಲಿ ಹಾಡಿದೆ. ನನ್ನ ಪ್ರಾರ್ಥನೆಯನ್ನು ಪ್ರಭುವು ಮನ್ನಿಸಿದನೋ ಎಂಬಂತೆ ಮೇಘ ರಾಜನ ಗರ್ಜನೆ ಕಡಿಮೆಯಾಯಿತು. ಹನಿ ಉದುರುವುದು ನಿಂತಿತು. ಮಳೆಯ ಆರ್ಭಟಕ್ಕೆ ಹೆದರಿ ಜನ ಅಲ್ಲಲ್ಲೇ ಸರಿದಿದ್ದರು. ಶ್ರೀ ಮಾತೆಯವರ ಕಾರ್ಯಕ್ರಮವಿದೆಯೆಂದು ಮುಂಚೆಯೇ ಪ್ರಕಟಿಸಿದ್ದ ಕಾರಣ ಜನರು ಮೈಯೆಲ್ಲಾ ಕಣ್ಣಾಗಿ ವೀಕ್ಷಿಸುತ್ತಿದ್ದರು. ಆಗ ನನ್ನಿಂದ ಪ್ರಾರ್ಥನೆ 'ಓಂ' ಕಾರದೊಡನೆ ಆರಂಭವಾಯಿತು. ನನ್ನ ಕಾರ್ಯಕ್ರಮಕ್ಕಾಗಿ ಮಳೆಯ ಭಯವನ್ನೂ ಲೆಕ್ಕಿಸದೆ ಜನತೆ ಧಾವಿಸತೊಡಗಿತು. ಪ್ರಾರ್ಥನೆ ಮುಗಿಯುವನಿತರಲ್ಲಿ ಸಭಾಂಗಣ ತುಂಬಿ ತುಳುಕುತ್ತಿತ್ತು. ನಾನು ಎದ್ದು ನಿಲ್ಲುತ್ತಲೇ ಚಪ್ಪಾಳೆ ತಟ್ಟಿ ಜನತೆ ಸ್ವಾಗತಿಸಿತು. "ಬಸವಣ್ಣ ಇಂದು ಬಹಳ ಉದ್ರೇಕಗೊಂಡಂತೆ ಕಾಣುತ್ತದೆ. ಬಹುಶಃ ಬಸವಣ್ಣನ ಕ್ರಾಂತಿಕಾರಕ ವಿಚಾರಗಳಿಗೆ ಬಾಗೇವಾಡಿ ತಾಣವನ್ನೀಯದೆ, ಬಸವಣ್ಣನನ್ನು ಹೊರಗೆ ಬಿಟ್ಟಿದ್ದಕ್ಕೆ ಅವನಿಂದು ಮುನಿದಿರಬೇಕು" ಎಂದು ನಾನು ಮಾತನ್ನಾರಂಭಿಸಿ, ಧರ್ಮವೆಂದರೇನು? ಧರ್ಮದ ಗುರಿ ಏನು ಎಂದು ಸುದೀರ್ಘವಾಗಿ ವಿವರಿಸಿದೆನು. ಅತ್ಯಂತ ಕುತೂಹಲಿಗರಾಗಿ ಜನರು ತನ್ಮಯತೆಯಿಂದ ಭಾಷಣ ಆಲಿಸಿದರು. ಕಾರ್ಯಕ್ರಮ ಬಹಳ ಯಶಸ್ವೀಪೂರ್ಣವಾಯಿತು. ಅದರ ಪ್ರಭಾವ ಪತ್ರಿಕೆಗಳಲ್ಲಿ ಸ್ಪಷ್ಟವಾಗಿ ತೋರಿ ಬರುತ್ತಿತ್ತು. ದಿನಾಂಕ ೩-೫-೧೯೬೮ರ ಸಂಯುಕ್ತ ಕರ್ನಾಟಕ ಪತ್ರಿಕೆಯು ನನ್ನ ಫೋಟೋ ಸಹಿತ ಕಾರ್ಯಕ್ರಮದ ಸಿಂಹಾವಲೋಕನ ಮಾಡುತ್ತ ಇಂತು ನುಡಿದಿತ್ತು.

"ಅಭಿನವ ಅಕ್ಕಮಹಾದೇವಿ ಎಂದು ಬೆಳಕಿಗೆ ಬರುತ್ತಿರುವ ಶ್ರೀ ಮಾತೆ ಮಹಾದೇವಿ ಇವರು ಬಸವಣ್ಣನ ಮಹಾತ್ಮೆಯನ್ನು ಕೊಂಡಾಡಿದರು.

"ಶ್ರೀ ಮಾತೆ ಮಹಾದೇವಿ ಅವರು ಎಲ್ಲರ ಕುತೂಹಲ ಕೆರಳಿಸಿದ, ಎಲ್ಲರ ಗಮನ ಸೆಳೆದ, ಕೊನೆಗೆ ಎಲ್ಲರ ವಾತ್ಸಲ್ಯಕ್ಕೆ ಪಾತ್ರರಾದ ಶರಣೆ. ಅವರ ನಿರರ್ಗಳವಾಣಿ ಸುಸಂಬದ್ಧ ತರ್ಕ ಸರಣಿ, ಮನಮುಟ್ಟುವಂಥ ಬಸವ ಧರ್ಮದ ತಿರುಳಿನ ವಿವರಣೆ, ಸರಳಸುಂದರ ವಾಗ್ವೈಖರಿಗಳಿಂದ ಅವರು



ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ದಿ.30-4-2012ರಂದು



ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ಕುಲಪತಿ
ಡಾ॥ ಜೆ.ಎಸ್.ಪಾಟೀಲ್ ಅವರಿಂದ ಧರ್ಮಚಿಂತನಗೋಷ್ಠಿಯ ಉದ್ಘಾಟನೆ




ಪೀಠಾರೋಹಣದ ನಂತರ ಧಾರವಾಡ ನಗರದಲ್ಲಿ ಮೆರವಣಿಗೆ. ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಸಿದ್ಧಣ್ಣ ನಟೇಕರ್ ಅವರಿಂದ ಮಾಲಾರ್ಪಣೆ



ಧಾರವಾಡದಲ್ಲಿ ಸಿ.ಪಿ.ಐ ಆಗಿರುವ ಶರಣ. ಎಂ.ಐ. ಮುಪ್ಪಿನಮಠ ಅವರಿಗೆ ಸತ್ಕಾರ



ಧಾರವಾಡದಲ್ಲಿ ಒಂದು ಲಕ್ಷ ರೂ.ಗಳ ದೇಣಿಗೆ ಕೊಟ್ಟ ಹುಬ್ಬಳ್ಳಿಯ
ಶರಣ. ಲಿಂಗರಾಜ ಇಂಗಳಳ್ಳಿ ಮತ್ತು ಶರಣೆ. ಕಮಲಾ ಅವರಿಗೆ ಸತ್ಕಾರ



ಧಾರವಾಡದಲ್ಲಿ ಒಂದು ಲಕ್ಷ ರೂ.ಗಳ ದೇಣಿಗೆ ಕೊಟ್ಟ ಹುಬ್ಬಳ್ಳಿಯ
ಶರಣ. ಮೃತ್ಯುಂಜಯ ಕುರವತ್ತಿ ಮತ್ತು ಶರಣೆ. [illegible] ಅವರಿಗೆ ಸತ್ಕಾರ



ಕುದುರೆ ಸಾರೋಟಿನಲ್ಲಿ ಪೀಠಾಧಿಕಾರಿಗಳಾದ ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿಯವರ ಮೆರವಣಿಗೆ. ಮುಂದೆ ಶರಣ ವೇಷಧಾರಿಗಳು







ಸಾಲಾಗಿ ಮೆರವಣಿಗೆಯಲ್ಲಿ ಪಥ ಸಂಚಲನ ಮಾಡುತ್ತಿರುವ ಶರಣ ಶರಣೆಯರು.



ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಉಪಮೇಯರ್
ಭಾರತಿ ಪಾಟೀಲರಿಂದ 3ನೆಯ ಶರಣೋತ್ಸವದ ಉದ್ಘಾಟನೆ. ದಿ.28-4-2012



ಶರಣೆ. ಡಾ|| ಶಾಂತಾ ಇಮ್ರಾಪುರ ಅವರಿಂದ ಮಹಿಳಾಗೋಷ್ಠಿಯ ಉದ್ಘಾಟನೆ



ಧರ್ಮಚಿಂತನಗೋಷ್ಠಿಯಲ್ಲಿ ಡಾ|| ರಾಜಣ್ಣ ವೈದ್ಯ ಇವರಿಂದ ಧ್ವಜಾರೋಹಣ ದಿ.29-4-2012

ಜನ ಸಮೂಹದ ಆಕರ್ಷಣೆಯ ಕೇಂದ್ರ ಬಿಂದುವಾದರು. ಪಂಡಿತ ಪಾಮರರಿಬ್ಬರ ಆದರಕ್ಕೂ ಪಾತ್ರರಾದರು. ಪಂಚಾಚಾರಗಳಲ್ಲಿ ಅಡಕವಾಗಿರುವ ಸಮಾಜವಾದಿ ಸಮಾಜ ರಚನೆಯ ತಳಹದಿಯನ್ನು ಬೆಳಕಿಗೆ ತಂದರು."

ನನ್ನ ಭಾಷಣದಿಂದ ಸಂತೋಷಗೊಂಡ ಜನರ ಪ್ರತಿಕ್ರಿಯೆ ನೋಡಿ ಕಾರ್ಯಕ್ರಮ ವ್ಯವಸ್ಥಾಪಕರು ಇನ್ನೂ ಎರಡು ಉಪನ್ಯಾಸ ನೀಡಬೇಕೆಂದು ವಿನಂತಿಸಿದರು. ಆಗಲಿ ಎಂದು ಒಪ್ಪಿ ಇನ್ನೂ ಒಂದು ಉಪನ್ಯಾಸ ಮಾಡಿದೆ. ಮುಂದೆ ಗಜೇಂದ್ರಗಡಕ್ಕೆ ಪೂಜ್ಯ ಗುರುಗಳ ಪ್ರವಚನ ಮುಕ್ತಾಯಕ್ಕೆ ಹೋಗುವುದಿತ್ತು. ಹೀಗಾಗಿ ಎರಡನೆಯ ಉಪನ್ಯಾಸಕ್ಕೆ ಅವರಿಗೆ ಸಮಯ ಕೊಡಲು ಆಗಲಿಲ್ಲ. ಜನಪ್ರಿಯತೆ ಜಾಸ್ತಿಯಾಗುತ್ತ ಉಪನ್ಯಾಸಕ್ಕೆ ಆಹ್ವಾನ ಬರುತ್ತಲಿತ್ತು. ಇದರ ಮಧ್ಯೆಯೇ ಎಂ.ಎ. ಅಭ್ಯಾಸ ಸಾಗುತ್ತಲಿತ್ತು. ದರ್ಶನಕ್ಕೆ ಬರುವ ಜನ ಬೇರೆ. ನನ್ನದೋ ದಾಕ್ಷಿಣ್ಯ ಸ್ವಭಾವ, ಮಾತನಾಡಿಸದೆ ಯಾರನ್ನೂ ವಾಪಸ್ಸು ಕಳಿಸುವಂತಿಲ್ಲ. ಧಾರವಾಡದಲ್ಲಿದ್ದರೆ ಜನರಿಂದ ತಪ್ಪಿಸಿಕೊಳ್ಳಲು ಲೈಬ್ರರಿಗೆ ಹೋಗಿ ಬಿಡುತ್ತಿದ್ದೆ. ಬೆಳಿಗ್ಗೆ ಲೈಬ್ರರಿ ಬಾಗಿಲು ತೆರೆಯುತ್ತಲೇ ಒಳಗೆ ಹೋಗಿ, ತರಗತಿ ಇದ್ದಾಗ ಹಾಜರಾಗಿ ಪುನಃ ಲೈಬ್ರರಿಯಲ್ಲಿ ರಾತ್ರಿ 9-00ರತನಕ ಕುಳಿತುಕೊಳ್ಳುತ್ತಿದ್ದೆ. ಯಾರಾದರೊಬ್ಬರು ಕರೆಯಲು ಬರುತ್ತಿದ್ದರು. 9-00ಕ್ಕೆ ಲೈಬ್ರರಿ ಮುಚ್ಚುತ್ತಿತ್ತು. ನಾನು ನಡೆದುಕೊಂಡೇ ಆಶ್ರಮಕ್ಕೆ ಹೋಗುತ್ತಿದ್ದೆ. ದಾರಿಯಲ್ಲಿ ಕತ್ತಲು, ದಟ್ಟವಾದ ಮಾವಿನ ತೋಪು, ಮನೆಗಳೇ ಇರಲಿಲ್ಲ. ಆದರೂ ಭಯ ಎನಿಸುತ್ತಿರಲಿಲ್ಲ. ಮಂತ್ರ ಜಪ ಮಾಡಿಕೊಳ್ಳುತ್ತ ಧಾವಿಸುತ್ತಿದ್ದೆ.

1969ನೆಯ ಇಸವಿ. ಪರೀಕ್ಷೆ ಹತ್ತಿರ ಬಂದಂತೆ ಆತಂಕ ಶುರುವಾಯಿತು. ಧಾರವಾಡದಲ್ಲಿ ಇದ್ದರೆ ಅಭ್ಯಾಸ ಸಾಗುವುದಿಲ್ಲ ಎಂದು ಮೈಸೂರಿಗೆ ಹೋದೆ. ಪೂಜ್ಯ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಸರಸ್ವತಿಪುರಂದಲ್ಲಿದ್ದ ಮಹಿಳಾ ವಿದ್ಯಾಪೀಠದಲ್ಲಿ ನನಗೆ ಉಳಿಯಲಿಕ್ಕೆ ಒಂದು ಕೋಣೆ ಮಾಡಿಕೊಟ್ಟರು. ಶ್ರೀ ಮಠದಿಂದಲೇ ಪ್ರಸಾದ ಕಳಿಸುತ್ತಿದ್ದರು. ಪರೀಕ್ಷೆಗೆ ಅಭ್ಯಾಸ ಮಾಡಿ ಪರೀಕ್ಷೆ ಸಮಯಕ್ಕೆ ಧಾರವಾಡಕ್ಕೆ ಬಂದೆನು. ಎಲ್ಲಾ ಪೇಪರ್ ಚೆನ್ನಾಗಿ ಆದವು. ಮರುದಿನ ಮನಶಾಸ್ತ್ರ. ಮಠಕ್ಕೆ ಜನ ಬಂದುಬಿಟ್ಟರು. ಅನ್ನುವಂತಿಲ್ಲ, ಅನುಭವಿಸುವಂತಿಲ್ಲ. ಮನಸ್ಸಿಗೆ ತೀವ್ರ ಕಳವಳವಾಯಿತು. ಮೊದಲು ಏನೇ ಓದಿರಲಿ, ಎಷ್ಟೇ ಓದಿರಲಿ ಹಿಂದಿನ ದಿನ ಓದಿಕೊಳ್ಳುವುದು ಬಹುಮುಖ್ಯ. ಫೇಲಾದರೆ ಎಷ್ಟು ಅವಮಾನಕರ ಎಂದು ದುಗುಡ. ರಾತ್ರಿ ಬಹಳ ಹೊತ್ತಿನವರೆಗೆ ಓದಿ ದುಗುಡದಲ್ಲಿಯೇ ಮಲಗಿಕೊಂಡೆ. ಕನಸು ಬಿದ್ದಿತು. ಅದರಲ್ಲಿ ಒಂದು ಪ್ರಶ್ನೆ ಪತ್ರಿಕೆ, ಮನೋವಿಜ್ಞಾನದ್ದೆ. ಆ ಪ್ರಶ್ನೆಗಳನ್ನು ನೆನಪಿಟ್ಟುಕೊಂಡು ಮರುದಿನ ಬೆಳಿಗ್ಗೆ ಬೇಗನೆ ಸಿದ್ಧಳಾಗಿ ವಿಶ್ವವಿದ್ಯಾಲಯದ ಗಾರ್ಡನ್ ನಲ್ಲಿ ಒಂದು ಗಿಡದ ಕೆಳಗೆ ಕುಳಿತು ಓದತೊಡಗಿದೆ. ಏನಾಶ್ಚರ್ಯ ! ನನ್ನ ಕನಸಲ್ಲಿ ಕಂಡ ಪ್ರಶ್ನೆ ಪತ್ರಿಕೆ ಎದುರಲ್ಲಿ ಬಂದಿತ್ತು. ದೇವರ ಲೀಲೆಗೆ ಅಚ್ಚರಿ ಎನಿಸಿತು. ಆ ಪತ್ರಿಕೆಯಲ್ಲಿ ನನಗೆ 70ರ ಮೇಲೆ ಅಂಕಗಳು ಬಂದಿದ್ದವು. ನಾನು ಕಂಡ ದೈವೀ ಕನಸುಗಳಲ್ಲಿ ಇದೂ ಒಂದು. ಪ್ರಥಮ ದರ್ಜೆಯಲ್ಲಿ ಎಂ.ಎ ತರಗತಿಯಲ್ಲಿ ತೇರ್ಗಡೆಯಾದೆ.

ನನಗಿಂತಲೂ ಹೆಚ್ಚು ಹರ್ಷಿಸಿದವರು ಪೂಜ್ಯ ಗುರುಗಳು. ಏಕೆಂದರೆ ಅವರು ಎಂ.ಎ ತತ್ತ್ವಜ್ಞಾನ ಓದಬೇಕೆಂದು ಪ್ರವೇಶ ಪಡೆದರಾದರೂ, ಎರಡನೆ ಅವಧಿಯ ಶುಲ್ಕ ಕಟ್ಟಲಾರದೆ ಹಾಸ್ಟೆಲ್ ವೆಚ್ಚ ಭರಿಸಲಾರದೆ ಓದುವುದನ್ನು ಅರ್ಧಕ್ಕೇ ಕೈ ಬಿಟ್ಟರು. "ಇದರ ಸೇಡು ಹೇಗೆ ತೀರಿಸಿಕೊಳ್ಳುವುದೆಂದರೆ ಇನ್ನಿತರರಿಗೆ ಓದಿಸಿ" ಎಂದು ತಮಾಷೆಯಾಗಿ ಹೇಳುತ್ತಿದ್ದರು. ಹೀಗಾಗಿ ತಾವು ಓದಲಾಗದಿದ್ದರೂ ನನಗೆ ಓದಿಸಲು ಆಯಿತಲ್ಲ ಎಂಬ ಸಮಾಧಾನ ಅವರಿಗೆ.

ಶ್ರಾವಣ ಮಾಸ ಮುಂದಿತ್ತು. ಬಾಗಲಕೋಟೆಯ ಶಿವಾನುಭವ ಸಮಿತಿಯವರು ಪೂಜ್ಯ ಗುರುಗಳನ್ನು ಕರೆಯಲು ಬಂದರು. ಶ್ರಾವಣ ಮಾಸಕ್ಕೆ ಆಗಲೇ ಪೂಜ್ಯ ಗುರುಗಳದು ನಿಶ್ಚಿತವಾಗಿತ್ತು. "ಇವರನ್ನು ಕರೆದೊಯ್ಯಿರಿ ಎಂದು ಅವರಿಗೆ ಹೇಳಿದರು. "ನಮ್ಮ ಬಾಗಲಕೋಟೆ ವಿಚಿತ್ರ ಊರು, ನಿಮಗೆ ಗೊತ್ತೇ ಇದೆ, ಅನುಭವಿಕರು ಬೇಕು" ಎಂದರು ಅವರು. ನಿಜ, ನಾನಿನ್ನೂ ಒಂದೂ ಪ್ರವಚನವನ್ನು ಮಾಡಿರಲಿಲ್ಲ.

ಉಪನ್ಯಾಸಗಳನ್ನು ವಿಷಯಾಧಾರಿತವಾಗಿ ಅಲ್ಲೊಂದು ಇಲ್ಲೊಂದು ಮಾಡುವುದು ಬೇರೆ, ಅವ್ಯಾಹತವಾಗಿ, ಅಖಂಡವಾಗಿ ಒಂದು ಸೂತ್ರ ಹಿಡಿದು ಪ್ರವಚನ ಮಾಡುವುದು ಬೇರೆ.

"ನನ್ನ ಮಾತು ನಂಬಿರಿ, ಇವರನ್ನು ಕರೆದುಕೊಂಡು ಹೋಗಿರಿ, ನೀವೇ ಆಮೇಲೆ ಕೊಂಡಾಡುತ್ತೀರಿ." ಗುರುಗಳು ಹೇಳಿದರು. ಬಂದವರು ಅರೆಮನಸ್ಸಿನಿಂದಲೇ ಆಹ್ವಾನವಿತ್ತು ಹೋದರು. ಪೂಜ್ಯರ ಆಶೀರ್ವಾದ ಪಡೆದು ಹೊರಟೆನು. 1969ರ ಶ್ರಾವಣ ಶುದ್ಧ ಪ್ರತಿಪದೆಯಂದು (14-8-1969) ಪ್ರವಚನ ಪ್ರಾರಂಭವಾಯಿತು. ಆಶ್ಚರ್ಯ ಮತ್ತು ಅದ್ಭುತ ಎನ್ನುವಂತೆ ವೃದ್ಧಿಯಾಯಿತು. ದಿನದಿನಕ್ಕೆ ಜನರು ಹೆಚ್ಚಾಗಿ ಕಿಕ್ಕಿರಿದು ನೆರೆಯತೊಡಗಿದರು. ಕಾಂಪೌಂಡ್ ಮೇಲೆ ಗಿಡಮರಗಳ ಮೇಲೆ ಕುಳಿತು ಜನ ಕೇಳುತ್ತಿದ್ದರು. ನನ್ನ ಮೊಟ್ಟ ಮೊದಲ ಪ್ರವಚನವದು. ನಾನೂ ಮರೆತಿಲ್ಲ. ಬಾಗಲಕೋಟೆ ಜನರೂ ಮರೆತಿಲ್ಲ. ಸುಮಾರು 40 ದಿವಸ ಪ್ರವಚನ ಮಾಡಿ ನಂತರ ಮುಧೋಳಕ್ಕೆ ಹೊರಟೆ. ನಾನು ಪ್ರಯಾಣಿಸುತ್ತಿದ್ದ (ಬಾಡಿಗೆ) ಕಾರನ್ನು ಜನರು ಮುಂದೆ ಬಿಡಲು ಸಿದ್ಧರಿಲ್ಲ. ಅಳೋವರು, ರಸ್ತೆ ಮೇಲೆ ಹೊರಳಾಡುವವರು, ಕಾರಿಗೆ ಅಡ್ಡ ಮಲಗುವವರು ಬಹಳ ಜನ. ಅವರ ಗೋಳಾಟ ನೋಡಿ ನನಗೂ ಅಳುಬರುತ್ತಿತ್ತು. ಕರ್ತವ್ಯದ ಕರೆ ಎಳೆಯುತ್ತಿತ್ತು. ಎಲ್ಲರಿಂದ ಬಿಡಿಸಿಕೊಂಡು ಮುಂದಿನ ಊರಿಗೆ ಹೋದೆ. ಅಲ್ಲಿಯೂ ಹಾಗೆಯೆ. ಜನರು ಕಿಕ್ಕಿರಿದು ಸೇರುತ್ತಿದ್ದರು. ಒಂದು ಶಾಲೆಯ ಕಾಂಪೌಂಡ್ ಒಡೆದು ಕೂಡ್ರಲು ಜನರಿಗೆ ವ್ಯವಸ್ಥೆ ಮಾಡಿ ಕೊಡಲಾಯಿತು. ಮುಧೋಳದ ನಂತರ ಜಮಖಂಡಿ. ಅಲ್ಲೂ ಅಷ್ಟೆ. ಬೆಲ್ಲಕ್ಕೆ ಇರುವೆ ಮುತ್ತುವಂತೆ ಜನರು ಪ್ರವಚನಕ್ಕೆ ಧಾವಿಸುತ್ತಿದ್ದರು. ನನ್ನನ್ನು ಕಳಿಸುವ ದಿನವಂತೂ ಸಹಸ್ರಾರು ಜನರು ಊರಿನ ಹೊರಗೆ 2-3 ಕಿಲೋಮೀಟರ್ ಪಾದಯಾತ್ರೆಯಲ್ಲಿ ಬೀಳ್ಕೊಟ್ಟರು.

ಬಾಗಲಕೋಟೆಯದು ನನ್ನ ಮೊಟ್ಟ ಮೊದಲ ಪ್ರವಚನ. ಇಲ್ಲಿಯವರೆಗೆ ಭಾಷಣಗಳನ್ನಷ್ಟೆ ಮಾಡಿದ್ದೆ. ಮೊದಲ ಪ್ರವಚನವೇ ಅತ್ಯಂತ ಯಶಸ್ವಿಯಾಯಿತು. ದಿನದಿನಕ್ಕೆ ಕಳೆ ಏರಿತಲ್ಲದೆ ಸರ್ವ ರೀತಿ ನೀತಿ ಧರ್ಮ ಜಾತಿಗಳ ಜನರೂ ಶ್ರೋತೃವರ್ಗದಲ್ಲಿ ಸಮಾವೇಶಗೊಂಡಿರುವುದೇ ಇದರ ವೈಶಿಷ್ಟ್ಯ. ಇಂತಹ ಒಂದು ದಿನದ ಸಭೆಗೆ ಆಗಮಿಸಿ ಆನಂದ ಉದ್ಗಾರ ತೆಗೆದ ತತ್ವ ಶಿಖಾಮಣಿಗಳೋರ್ವರ ಸದಭಿಪ್ರಾಯವಿದು.

"ದಿ ೮-೯-೧೯೬೯ : ಪರಮಪೂಜ್ಯ ಮಾತೆಯವರ ಸನ್ನಿಧಿಗೆ ವಿರೂಪಾಕ್ಷಯ್ಯ ಹಿರೇಮಠ್, ರಾಮಪುರ ಇವರ ನಮಸ್ಕಾರಗಳು. ಮೊನ್ನೆ ನಾನು ಬಾಗಿಲುಕೋಟೆಗೆ ಪ್ರವಚನಕ್ಕೆ ಬಂದು ಅಕ್ಕಮಹಾದೇವಿ ಪ್ರವಚನ ಕೇಳಲು ಅವಕಾಶ ಸಿಕ್ಕಿತು. ತಮ್ಮ ಆಧ್ಯಾತ್ಮಿಕ ವಿಷಯ, ಸರ್ವವಿದ್ಯಾ ಸಂಗ್ರಹ, ಶಾಂತಸ್ವಭಾವದಿಂದ ಸರಳ ಶೈಲಿಯಲ್ಲಿ ಸವಿಸ್ತಾರವಾಗಿ ಅಕ್ಕನ ಚರಿತ್ರೆಯನ್ನು ಪ್ರವಚನ ಮಾಡಿದ್ದು, ಹಾಗೂ ಸಾವಿರಾರು ಜನ ಹೆಣ್ಣುಮಕ್ಕಳು ಮತ್ತು ಪುರುಷರು, ಇದಕ್ಕಿಂತ ಮಿಗಿಲಾಗಿ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ಸಹಿತ ತಮ್ಮ ಪ್ರವಚನ ಕೇಳಲಿಕ್ಕೆ ಬಂದಿದ್ದು ನೋಡಿ ನನಗೆ ಅತ್ಯಂತ ಆನಂದವಾಯಿತು. ಬಾಗಲಕೋಟೆಯಲ್ಲಿ ಪ್ರತಿವರ್ಷ ಪುರಾಣ ಪ್ರವಚನಕ್ಕೆ ಅಷ್ಟು ಜನರು ಆಸಕ್ತಿಯಿಂದ ಬಂದು ಶಾಂತರೀತಿಯಿಂದ ಕೇಳಿದ್ದನ್ನು ನೋಡಿರಲಿಲ್ಲ. ಮೊದಲಬಾರಿಗೆ ನಾನು ಕಂಡಂತಾಯಿತು. ಪರಿಣಾಮವಾಗಿ ಆನಂದವಾಯಿತು. ಇದು ಅಕ್ಕಮಹಾದೇವಿಯ ಕಾರುಣ್ಯವೋ ಅಥವಾ ತನು-ಮನಗಳಿಂದ 'ಜನ ಸೇವೆಯೇ ಜಗದೀಶನ ಸೇವೆ' ಎಂಬ ನಾಣ್ಣುಡಿಗನುಸರಿಸಿ, ಸ್ವಧರ್ಮವನ್ನು ಉಚ್ಚಮಟ್ಟದೊಳು ಇರಿಸಿ ಬಸವಾದಿ ಪ್ರಮಥರು ನಡೆದುಹೋದ ಹಾದಿಯಲ್ಲಿ ನಡೆದು; ಅಂಗ ಸುಖವನ್ನು ಬಯಸದೇ ದಿವ್ಯಾನಂದದಲ್ಲಿ ಕಾಲ ಕಳೆದು ಪವಿತ್ರರಾಗಿ ಪರಮಾತ್ಮನ ಕೃಪೆ ಪಡೆದ ನಿಮ್ಮ ಪರಿಶ್ರಮದ ಮಹಿಮೆಯೋ ಹೇಳಲಿಕ್ಕೆ ಬಾರದಾಗಿದೆ. ಯಾಕೆಂದರೆ ಇಷ್ಟು ವರ್ಷಗಳಲ್ಲಿ ಬಾಗಲುಕೋಟೆಯ ಪ್ರವಚನಕ್ಕೆ ಇಷ್ಟು ಜನರು ಕೂಡಿದ್ದನ್ನು ನಾನು ನೋಡಿಯೇ ಇರಲಿಲ್ಲ. ಇಂಥಾ ಕಿರಿದಾದ ವಯಸ್ಸಿನಲ್ಲಿ ಹಿರಿದಾದ ಸಿದ್ಧಿ ಸಾಧಿಸಿಕೊಂಡು ಶಿವನ ಕೃಪೆ ಪಡೆದು, ಕಾರುಣ್ಯ ಪೋಷಿತರಾಗಿ ಸಮಾಜೋದ್ಧಾರ ಕಾರ್ಯದಲ್ಲಿ ಹಗಲಿರುಳು ದುಡಿಯುತ್ತಿರುವುದನ್ನು ನೋಡಿ ಹಿಡಿಸಲಾರದ ಆನಂದವಾಗಿದೆ." *****

ಭಾಗ -42

ಬಸವ ವಚನಾಮೃತ

- ಮಾತಾಜಿ

836. ಲಿಂಗಾನುಭಾವದಿಂದ ಭವಂ ನಾಸ್ತಿ.

ಆದ್ಯರ ವಚನ ವೇದ್ಯರಿಗಲ್ಲದೆ ಸಾಧ್ಯವಾಗದು.
ಲಿಂಗದೇವಾ, ನಿಮ್ಮ ಅನುಭಾವದಿಂದ
ಎನ್ನ ಭವಂ ನಾಸ್ತಿಯಾಯಿತ್ತು. -ಬವದೀ. 838

ಈಗಾಗಲೇ ತಿಳಿದಿರುವಂತೆ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಸಪ್ತ ಗಣಾಧೀಶರನ್ನು 'ಆದ್ಯರು' ಎಂದು ಗುರುತಿಸಬೇಕು. ಕೆಲವೇ ಕೆಲವರು ಆದ್ಯರ ಈ ನುಡಿಗಳನ್ನು ಅಳವಡಿಸಿಕೊಂಡು 'ವೇದ್ಯ'ರಾಗುತ್ತಾರೆ. ಇನ್ನು ಬಾಕಿಯವರೆಲ್ಲ ಸಾಮಾನ್ಯ ಅನುಯಾಯಿಗಳು. ಇವರನ್ನು 'ಸಾಧ್ಯರು' ಎಂದು ಸಾಂಪ್ರದಾಯಿಕವಾಗಿ ಕರೆಯಲಾಗಿದೆ. "ಆದ್ಯ ಶರಣರ ವಚನಗಳನ್ನು ಕೆಲವೇ ಕೆಲವು ಉನ್ನತ ಮಟ್ಟದ ಸಾಧಕರು ಅನುಷ್ಠಾನ ಮಾಡಬಲ್ಲವರಾಗಿದ್ದಾರೆ. ಉಳಿದವರಿಗೆ ಅದು ಕಬ್ಬಿಣದ ಕಡಲೆ. ಲಿಂಗದೇವಾ, ನಿಮ್ಮ ದಿವ್ಯಾನುಭವದ ಪರಿಣಾಮವಾಗಿ ಎನ್ನ ಭವವು ನಾಶವಾಯಿತು." ಎನ್ನುತ್ತಾರೆ ಗುರು ಬಸವಣ್ಣನವರು.

837. ವಿಲಕ್ಷಣ ಸಂಬಂಧಗಳು.

ಅಸಂಬಂಧ ಸಂಬಂಧವಾಯಿತ್ತು, ಲಿಂಗಸಾರಾಯರ ಸನುಮತದಿಂದ.
ಉತ್ತಮ ಮಧ್ಯಮವ ಕೆಡಿಸಿತ್ತು, ಏಕೋ ಸತಿಪತಿಗುಣದಿಂದ-
ಗರುವರ ಗರುವತನ ಲಿಂಗದೇವನ ಅನುಭಾವದಿಂದ. -ಬವದೀ. 839

ಲಿಂಗಾನುಭಾವಿಗಳ ಒಡನಾಟದಿಂದ ಸಂಬಂಧಗಳು ಬದಲಾಗುತ್ತವೆ ಲೌಕಿಕವಾಗಿ ನೋಡಿದರೆ ಪರಸ್ಪರ ಹಾರ್ದಿಕ ಸಂಬಂಧ ಅಳವಡುತ್ತದೆ. ರಾಗದ್ವೇಷಗಳು ಅಳಿದು ಎಲ್ಲರನ್ನೂ ಆದರಿಸುವ ದೃಷ್ಟಿಕೋನ ಅಳವಡುತ್ತದೆ. ಸಮಾಜದಲ್ಲಿ ಆರ್ಥಿಕ ಸ್ಥಿತಿ, ಅಂತಸ್ತು, ಜಾತಿ ಹಿಡಿದು ಇವರು ಉತ್ತಮ, ಇವರು ಮಧ್ಯಮರು ಎಂಬ ಭೇದಭಾವ ಮಾಡುವ ಮಾನದಂಡ ಇಲ್ಲವಾಗುತ್ತದೆ. ಬ್ರಾಹ್ಮಣ ಕುಲದಲ್ಲಿ ಹುಟ್ಟ ಸಚಿವ ಪದವಿ ಹೊಂದಿದ ಮಧುವರಸ ಸಮಗಾರ ಜಾತಿಯಲ್ಲಿ ಹುಟ್ಟಿ ಚಮ್ಮಾವುಗೆ ಸಿದ್ಧಪಡಿಸುವ ಹರಳಯ್ಯ-ಇಬ್ಬರೂ ಶರಣರ ದೃಷ್ಟಿಯಲ್ಲಿ ಸಮಾನರು. ಇನ್ನು ಅಧ್ಯಾತ್ಮಿಕ ನಿಲುವಿಗೆ ಬಂದಾಗಲಂತೂ ವಿಲಕ್ಷಣ ಬದಲಾವಣೆ ಕಾಣಬರುತ್ತದೆ. ಶರಣಸತಿ ಭಾವದಿಂದ ಲಿಂಗಪತಿಗೆ ಶರಣ ಸ್ಥಲದಲ್ಲಿ ಶರಣರಾಗುವುದರಿಂದ ಲೌಕಿಕ ಗಂಡ ಹೆಂಡಿರ ಮಧ್ಯೆ ದಾಂಪತ್ಯ ಸಂಬಂಧವೇ ನಿಂತು ಹೋಗಿ ಇಬ್ಬರೂ ಲಿಂಗಪತಿಯ ಶರಣ ಸತಿಯರಾಗುವರು. ಗಂಡನು ಸಹ ಲಿಂಗದೇವನಿಗೆ ಹೆಣ್ಣಾಗುವನು. ಸ್ವತಃ ಗುರು ಬಸವಣ್ಣನವರು ಆ ಸ್ಥಿತಿ ಮುಟ್ಟಿದ ಬಗ್ಗೆ ತಾಯಿ ನೀಲಮ್ಮನವರ ವಚನ ಸಾಕ್ಷಿ ನುಡಿಯುತ್ತದೆ.

ಮಡದಿ ಎನ್ನಲಾಗದು ಎನ್ನನು ಬಸವಣ್ಣನಿಗೆ
ಪುರುಷನೆನ್ನಲಾಗದು ಬಸವನ ಎನಗೆ
ಈ ಉಭಯ ಕುಳವ ಹರಿದು ಬಸವನೆನ್ನ ಶಿಶುವಾದನು
ಬಸವಂಗೆ ಶಿಶುವಾನಾದೆನು.
ಸಂಗಯ್ಯನಿಕ್ಕಿದ ದಿವ್ಯವ ಮೀರಿ ಬಸವನೊಳ್ ಆನಡಗಿದೆನು.

838. ಹೃದಯ ಪೀಠಕ್ಕಾಗಿ ಬೇಡಿಕೆ.

ಶರಣಸನ್ನಿಹಿತನೈಕ್ಯವಹಲ್ಲಿ ಹರಿಬ್ರಹ್ಮಾದಿಗಳು ಮೊದಲಾದ
ತೆತ್ತೀಸಾದಿ ದೇವರ್ಕಳು 'ಉಘೇ ಉಘೇ' ಎನ್ನುತಿರಲು
ಐಕ್ಯ ಬಸವಣ್ಣಂಗೆ ಠಾವಾವುದಯ್ಯಾ ಎಂದೊಡೆ :
ಅಂಗದ ಬಲದಲ್ಲಿ ಬ್ರಹ್ಮನ ಸ್ಥಾನ,
ಎಡದಲ್ಲಿ ನಾರಾಯಣನ ಸ್ಥಾನ, ಒಲ್ಲೆನಯ್ಯಾ !

ಕೊರಳು ಗರಳದ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ,
ನಾಸಿಕ ವಾಯುವಿನ ಸ್ಥಾನ, ಕಣ್ಗಳು ಅಗ್ನಿಯ ಸ್ಥಾನ,
ಜಡೆ ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ,
ಹಿಂದು ಸೂರ್ಯನ ಸ್ಥಾನ,
ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನಂಗಳು,
ಗುಹ್ಯ ಕಾಮನ ಸ್ಥಾನ,
ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗ ಸ್ಥಾನ,
ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ,
ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ!
ಹೃದಯಕಮಳ ಮಧ್ಯದ ಅಂತರಾಳದ
ಏಕಪೀಠದ ಸಿಂಹಾಸನದ ತೆರಹ ಕೊಡು ಲಿಂಗದೇವಾ. –ಬವದೀ. 840

ಸದಾ ಶರಣ ಪ್ರೀತರಾದ ಬಸವಣ್ಣನವರು ಐಕ್ಯರಾಗುವಾಗ ಎಲ್ಲ ದೇವತೆಗಳು ಉಘೇ ಉಘೇ ಎಂದು ಜಯಘೋಷ ಮಾಡುವರು. ಆಗ ಗುರು ಬಸವಣ್ಣನವರು ಐಕ್ಯರಾಗಲು ಯಾವ ಸ್ಥಾನವನ್ನು ಆಯ್ಕೆ ಮಾಡಿಕೊಳ್ಳುವರು ಎಂದರೆ ಲಿಂಗದೇವನ ಹೃದಯ ಕಮಲದ ಮಧ್ಯದ ಅಂತರಾಳದ ಏಕಪೀಠದ ಸಿಂಹಾಸನವನ್ನು ಅಂದರೆ ದೇವನ ಹೃದಯ ಕಮಲವನ್ನು ಬಗಿದು ಹೋಗುವರು. ಇದನ್ನೇ ಲಿಂಗದೇವನಲ್ಲಿ ಬೇಡುವರು.

839. ದಿವ್ಯಾನುಭವದಲ್ಲಿ ತದ್ಗತ

ನೀನೊಲಿದಡೆ ಒಲಿ, ಒಲಿಯದಿದ್ದಡೆ ಸಮವೇದಿಸಿಕೊಳ್ಳಯ್ಯಾ,
ಲಿಂಗದ ಬೆಳಗನೊಳಕೊಂಡು ಸಮವೇದಿಸಿಕೊಳ್ಳಯ್ಯಾ.
ಲಿಂಗದೇವನಲ್ಲಿ ತದ್ಗತನಾದೆನಯ್ಯಾ. –ಬವದೀ. 841

ದೇವಾ, ನೀನೊಲಿದರೆಷ್ಟು, ಬಿಟ್ಟರೆಷ್ಟು ಒಲಿದರೆ ಒಲಿ, ಒಲ್ಲದಿದ್ದರೆ ಬಿಡು. ಲಿಂಗದ ಬೆಳಕನ್ನು ಒಳಗೊಂಡು ಸಮವೇಧಿಸಿಕೊ. ನಾನಂತೂ ಲಿಂಗದೇವನ ದಿವ್ಯಾನುಭವದಲ್ಲಿ ತದ್ಗತನಾದೆನಯ್ಯ. ಆ ದಿವ್ಯಾನುಭವವನ್ನು ವರ್ಣಿಸಲು ಸಹ ನಾನು ಅಸಮರ್ಥನಾಗಿದ್ದೇನೆ. ಒಂದು ಉಪ್ಪಿನಗೊಂಬೆ ಸಮುದ್ರದ ಆಳವನ್ನು ತಿಳಿಯುತ್ತೇನೆ ಎಂದು ಸಮುದ್ರದಲ್ಲಿ ಧುಮುಕಿತಂತೆ. ಅದು ಮರಳಿ ಬರಲು ಸಾಧ್ಯವೆ ? ಹಾಗೆ ದಿವ್ಯಾನುಭವದಲ್ಲಿ ಸಾಧಕ ಜೀವಿಯು ಕರಗಿ ಹೋಗಿ ಬಿಡುವನು. ಹೇಳಲು ಕೇಳಲು ಸಾಧ್ಯವಿಲ್ಲದ ತನ್ಮಯತೆ ಆವರಿಸಿಕೊಳ್ಳುತ್ತದೆ.

840. ಅನಿವಾರ್ಯ ಸ್ಥಿತಿ.

ಮಾಡುವರಿಲ್ಲ, ನೀ ಮಾಡದೆ ನಿಲ ಸಾಲೆ.
ಬೇಡುವರಿಲ್ಲ, ನೀ ಬೇಡದೆ ನಿಲ ಸಾಲೆ.
ಕೊಡುವರಿಲ್ಲ, ನೀ ಕೊಡದೆ ನಿಲ ಸಾಲೆ.
ಲಿಂಗದೇವ, ತಾನು ತಾನಾಗಿ
ನೀ ನೋಡದೆ ನಿಲ ಸಾಲೆ!. –ಬವದೀ. 842

ಈ ವಚನದಲ್ಲಿ ಅರ್ಥವಾಗದ ಪದ ನಿಲ ಸಾಲೆ. ಅರ್ಥಕೋಶದಲ್ಲಿ ಇದಕ್ಕೆ ನಿಲ್ಲಲಾರೆ ಎಂಬ ಅರ್ಥಕೊಡಲಾಗಿದೆ. ಕಷ್ಟಪಟ್ಟು ಅರ್ಥಮಾಡಲು ಯತ್ನಿಸೋಣ. ಈ ವಚನವು ಬಂದಿರುವ ಸನ್ನಿವೇಶ– ದಿವ್ಯಾನುಭವ ಸ್ಥಿತಿಯಲ್ಲಿ ಮನಸ್ಸು ತದ್ಗತವಾಗಿರುವುದು. ಗುರು ಬಸವಣ್ಣನವರ ಮನಸ್ಸು ಸಂಪೂರ್ಣ ಅಂತರ್ಮುಖಿಯಾಗಿದೆ. ಬಹಿರಂಗದ ಕ್ರಿಯೆಯಾದ ದಾಸೋಹ ಮುಂತಾದ್ದನ್ನು ಮಾಡುವುದರಲ್ಲಿ ಆಸಕ್ತಿ ಇಲ್ಲ. ಆದರೆ ಎಲೆ ಮನವೆ ನೀ ಮಾಡದೆ ಇರಲಾರೆ (ನಿಲಸಾಲೆ) ಬೇಡುವಿಕೆ ಈಗ ನಿಂತು ಹೋಗಿದೆ. ಏಕೆಂದರೆ ಪಡೆದುಕೊಳ್ಳಬಹುದಾದುದನ್ನು ಪಡೆದುಕೊಂಡಾಗಿದೆ. ಆದರೂ, ಎಲೆ ಮನವೆ ನೀನು ಬೇಡದೆ ಇರಲಾರೆ. ಲಿಂಗದೇವನ ಕೂಟ ಆಗಲೇ ಸಾಧ್ಯವಾಗಿರುವುದರಿಂದ ಕೂಡುವವರು ಯಾರಿಲ್ಲ. ಆದರೂ

ಎಲೆ ಮನವೆ ನೀನು ಕೂಡದೆ ಇರಲಾರೆ. ಲಿಂಗದೇವನು ತನ್ನ ಸಾಮರಸ್ಯವನ್ನು ಒದಗಿಸಿಕೊಟ್ಟಿರುವುದರಿಂದ ತಾನು ತಾನಾದ ಸ್ಥಿತಿ ಪ್ರಾಪ್ತವಾಗಿದೆ. ಇದನ್ನು ಎಲೆ ಮನವೆ ನೀ ನೋಡದೆ, ಅನುಭವಿಸದೆ ಇರಲಾರೆ.

841. ವಿಲಕ್ಷಣ ಸಂಬಂಧಗಳು.

ಆಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ
ತನು ಕರಗಿ ನೆರೆವ ಸುಖವ ನಾನೇನೆಂಬೆ.
ಕಡೆಗೋಡಿವರಿದುವೆನಗಯ್ಯಾ ನಯನದ ಸುಖಜಲಂಗಳು !
ನಮ್ಮ ಲಿಂಗದೇವರು ಮುಟ್ಟಿ
ನೆರೆವ ಸುಖವ ನಾನೇನೆಂಬೆ! –ಬವದೀ. 843

ಪರಮಾತ್ಮನೊಡನೆ ಸಾಮರಸ್ಯವನ್ನು ಹೊಂದಿದ ಗುರು ಬಸವಣ್ಣನವರು ಆ ಅನುಭವವನ್ನು ಬಗೆಬಗೆಯಾಗಿ ಬಣ್ಣಿಸುತ್ತಾರೆ. ಮೊದಲ ಮಳೆಯಾದಾಗ ಮೋಡದಿಂದ ಬೀಳುವ ಆಲಿಕಲ್ಲುಗಳು ಭೂಮಿಗೆ ಬೀಳುತ್ತಲೇ ಕರಗತೊಡಗುತ್ತವೆ. ಅರಗಿನ ಪುತ್ಥಳಿಗೆ ಅಗ್ನಿಸ್ಪರ್ಶವಾಗುತ್ತಲೇ ಉರಿಯ ಅಪ್ಪುಗೆಯಲ್ಲಿ ಅದು ಕರಗತೊಡಗುತ್ತದೆ. ಅದೇ ರೀತಿ ಲಿಂಗದೇವನ ಸಾಮರಸ್ಯವಾಗುತ್ತಲೇ ತನುಮನಗಳು ಆ ಅನುಭವದಲ್ಲಿ ಕರಗ ತೊಡಗುತ್ತವೆ. ಆ ಸುಖದ ಪರಿಣಾಮವಾಗಿ ಕಣ್ಣಿನಲ್ಲಿ ಆನಂದ ಬಾಷ್ಪಗಳು ಸುರಿಯುತ್ತವೆ. ಲಿಂಗದೇವನು ನೆರೆವ ಸುಖವನ್ನು ನಾನು ಎಂತು ಬಣ್ಣಿಸಲಿ ಅದು ವರ್ಣನಾತೀತ !

842. ಅನುಭಾವ ಶಾಸ್ತ್ರಾತೀತ

ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ಸಾಲದೆ ಅಯ್ಯಾ?
ಮಾಲೆಗಾರನ ಕೇಳಿ ನನೆಯರಳುವುದೆ?
ಆಗಮವನಿದಿರಿಂಗೆ ತೋರುವುದು ಆಚಾರವೆ ಅಯ್ಯಾ?
ನಮ್ಮ ಲಿಂಗದೇವನ ಕೂಡಿದ ಕೂಟದ ಕರುಳ ಕಲೆಯನು
ಇದಿರಿಂಗೆ ತೋರುವುದು ಆಚಾರವೆ ಅಯ್ಯಾ? –ಬವದೀ. 844

ನಾಲಿಗೆ ಯಾವುದಾದರೂ ವಸ್ತುವನ್ನು ತಿಂದು ಸಂತೋಷವನ್ನು ಅನುಭವಿಸುತ್ತದೆ ಎಂದುಕೊಳ್ಳುವಾ. ಇದಕ್ಕೆ ತಿಂದವನ ಮನಸ್ಸೇ ಸಾಕ್ಷಿಯೇ ವಿನಾ ಬೇರೆ ಪ್ರಮಾಣವನ್ನು ತೋರಿಸಲು ಸಾಧ್ಯವಿಲ್ಲ. ಸಂತೋಷ, ಆನಂದ ಅನುಭವವೇದ್ಯ. ಮಾಲೆಗಾರನನ್ನು ಕೇಳಿ ಮೊಗ್ಗು ಅರಳುವುದಿಲ್ಲ. ಅರಳಿದ ಹೂವನ್ನು ಆಯ್ದುಕೊಂಡು ಮಾಲೆಗಾರನು ಮಾಲೆಯನ್ನು ಸಿದ್ಧಪಡಿಸುವನು. ಅನೇಕ ಸಾಮಾಜಿಕ ನಿಯಮ, ನಿಬಂಧನೆಗಳಿಗೆ ಆಗಮ ಮುಂತಾದ ಶಾಸ್ತ್ರಗಳನ್ನು ತೋರಿಸಲಾಗುವುದು. ಆದರೆ ಅನುಭಾವವು ಶಾಸ್ತ್ರಕ್ಕತೀತ. ಉದಾಹರಣೆಗೆ ಶೂದ್ರ, ಅಸ್ಪೃಶ್ಯರು ಧರ್ಮ ಸಂಸ್ಕಾರಕ್ಕೆ ಅನರ್ಹರು ಎಂದು ವೇದ ಆಗಮಗಳು ಹೇಳುತ್ತವೆ. ಆದರೆ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯನಂತಹ ಶರಣರು ಲಿಂಗದೇವನ ಒಲುಮೆಯನ್ನು, ಸಾಮರಸ್ಯವನ್ನು ಸಾಧಿಸಿಬಿಟ್ಟಿದ್ದಾರೆ. ಲಿಂಗದೇವನನ್ನು ಕೂಡುವುದು ಕರುಳ ಕಲೆ. ಅದನ್ನು ಅನುಭವಿಸಬೇಕೇ ವಿನಾ ಇದಿರಿಟ್ಟು ತೋರುವುದು ಸಾಧ್ಯವಾಗದ ಸಂಗತಿ.

843. ಬೈಚಿಟ್ಟುಕೊಂಡನು.

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ.
ನಮ್ಮ ನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ!
ಲಿಂಗದೇವನು ತನ್ನೊಳಗೆ ಬೈಚಿಟ್ಟುಕೊಂಡನಾಗಿ. –ಬವದೀ. 845

ಲೌಕಿಕ ಗಂಡರ ರೀತಿಯಂತಲ್ಲ ನನ್ನ ಗಂಡನ ವರ್ತನೆ. ಲೌಕಿಕ ಗಂಡರದು ನಲ್ಲೆಯ ಸುತ್ತಮುತ್ತ ಸುಳಿದಾಡುತ್ತಾರೆ. ಸುಳಿದು ಶೃಂಗಾರ ಮಾಡುತ್ತಾರೆ. ಆದರೆ ನನ್ನ ಪತಿ ಸುಳಿದಾಡಲಿಲ್ಲ, ಶೃಂಗಾರವ ಮಾಡಲಿಲ್ಲ. ನನ್ನನ್ನು ಸಂಪೂರ್ಣವಾಗಿ ಆವರಿಸಿ (ಆಲಂಗಿಸಿ), ತನ್ನೊಳಗೆ ಬಚ್ಚಿಟ್ಟುಕೊಂಡು ಬಿಟ್ಟನು.

844. ವಿಲಕ್ಷಣ ಮರೆವು.

ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದರಿಯೆನು;
ಲಿಂಗದ ಬೆಳಗು ಒಳಗೊಂಡುದಾಗಿ ಏನೆಂದರಿಯೆನು.
ಲಿಂಗದೇವನ ಧ್ಯಾನದಿಂದ ನಾನೇನೆಂದರಿಯೆನು. –ಬವದೀ. 846

ಧ್ಯಾನವನ್ನು ಮಾಡುತ್ತ ಹೋದಂತೆ ಜ್ಞಾನದ ಬೆಳಗು ಮೂಡುತ್ತದೆ. ದಿವ್ಯಾನುಭವದ ಸುಳಿವು ಇಲ್ಲಿಂದ ಪ್ರಾರಂಭವಾದಂತೆ ಬಹಿರಂಗದ ಪ್ರಜ್ಞೆ ಅಳಿಯತೊಡಗುತ್ತದೆ. ಇದು ಅಜ್ಞಾನದ ಮರೆವೆಯಲ್ಲ. ಲಿಂಗದ ಬೆಳಕು ಆವರಿಸಿಕೊಳ್ಳತೊಡಗುತ್ತದೆ. ಲಿಂಗದೇವನ ಧ್ಯಾನ ಸಂಪೂರ್ಣವಾಗಿ ಆವರಿಸಿಕೊಂಡಾಗ 'ನಾನು' ಎಂಬ ಭಾವವು ಅಳಿಯುತ್ತದೆ. ಧಾತೃ-ಧ್ಯೇಯ-ಧ್ಯಾನ ಎಂಬ ತ್ರಿಪುಟಿ ಅಳಿಯುತ್ತದೆ.

845. ಲಿಂಗದೇವನ ಎಡೆ.

ಕಾಯವೆಂಬ ಘಟಕ್ಕೆ ಚೈತನ್ಯವೆ ಸಯದಾನ,
ಸಮತೆ ಎಂಬ ಜಲ, ಕರಣಾದಿಗಳೆ ಸ್ರವಣ
ಜ್ಞಾನವೆಂಬ ಅಗ್ನಿಯನಿಕ್ಕಿ
ಮತಿಯೆಂಬ ಸಟ್ಟುಗದಲ್ಲಿ ಘಟ್ಟಿಸಿ, ಪಾಕಕ್ಕೆ ತಂದು,
ಭಾವದಲ್ಲಿ ಕುಳ್ಳಿ'ರಿಸಿ ಪರಿಣಾಮದೋಗರವ ನೀಡಿದಡೆ,
ಲಿಂಗದೇವಂಗೆ ಆರೋಗಣೆಯಾಯಿತ್ತು. –ಬವದೀ. 847

ಶರೀರ ಎಂಬುದೇ ಘಟ (ಪಾತ್ರೆ) , ಚೈತನ್ಯವೇ ಪದಾರ್ಥಗಳು. ಚಿತ್ತಸಮತೆ ಎಂಬ ನೀರನ್ನು ಹಾಕಿ, ಕರಣೇಂದ್ರಿಯಗಳೆಂಬ ಕಟ್ಟಿಗೆ (ಸ್ರವಣ) ಇಟ್ಟು ಜ್ಞಾನ ಎಂಬ ಅಗ್ನಿ ಸ್ಪರ್ಶ ಮಾಡಬೇಕು. ಬುದ್ಧಿ ಎಂಬ ಸಟ್ಟುಗದಲ್ಲಿ ತಿರುವಿ ಹಾಕುತ್ತ ಪಾಕಕ್ಕೆ ತಂದು, ಭಾವ ಪೀಠದಲ್ಲಿ ಲಿಂಗದೇವನನ್ನು ಕುಳ್ಳಿರಿಸಿ ಪರಿಣಾಮ-ಸಂತೃಪ್ತಿ ಎಂಬ ಓಗರವನ್ನು ನೀಡಿದಾಗ. ದೇವನಿಗೆ ನಿಜವಾದ ಆರೋಗಣೆಯಾಗುವುದು.

846. ತುರೀಯಾತೀತ ಸ್ಥಿತಿ

ಕಂಗಳು ತುಂಬಿದ ಬಳಿಕ ನೋಡಲಿಲ್ಲ,
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ,
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ,
ಮನ ತುಂಬಿದ ಬಳಿಕ ನೆನೆಯಲಿಲ್ಲ,
ಮಹಂತ ಲಿಂಗದೇವನ! –ಬವದೀ. 848

ದಿವ್ಯಾನುಭವ ಆವರಿಸಿಕೊಂಡ ಬಳಿಕ ಮನಸ್ಸಿಗೆ ತುರೀಯಾತೀತ ಸ್ಥಿತಿ ಪ್ರಾಪ್ತವಾಗುತ್ತದೆ. ಕಣ್ಣುಗಳು ದೇವನ ತೇಜಸ್ಸನ್ನು ತುಂಬಿಕೊಂಡ ಬಳಿಕ ಇನ್ನೇನನ್ನೂ ನೋಡುವುದು ಉಳಿದಿಲ್ಲ. ಕಿವಿಗಳು ದಿವ್ಯವಾದ ಅನಾಹತನಾದವನ್ನು ತುಂಬಿಕೊಂಡ ಬಳಿಕ ಇನ್ನೇನನ್ನೂ ಕೇಳುವುದು ಉಳಿದಿಲ್ಲ. ಪೂಜೆಯನ್ನು ಮಾಡುತ್ತ ಕೈಗಳು ದಿವ್ಯಾನುಭವದ ಬಳಿಕ ಸ್ತಬ್ದವಾಗಿವೆ. ದೇವನ ನೆನಹು ಮನಸ್ಸಿನ ಪಾತ್ರೆಯನ್ನು ತುಂಬಿ ಚೆಲ್ಲವರಿದಿದೆ. ಇನ್ನೇನೂ ನೆನೆಯಲು ಉಳಿದಿಲ್ಲ. ಪೂಜೆಯನ್ನು ಮಾಡುತ್ತ ಮಾಡುತ್ತ ಕೈಗಳು ದಿವ್ಯಾನುಭವವನ್ನು ಮಹಾಂತ ಲಿಂಗದೇವನು ನೀಡಿದ್ದಾನೆ. ಇದು ಅರಿವಿನ ಮರೆವೆಯ (ತನ್ಮಯತೆಯ) ಸ್ಥಿತಿ !

847. ಶರಣನಿದ್ದುದೇ ದಿವ್ಯಕ್ಷೇತ್ರ

ಅಡಿಗಡಿಗೆ ಸ್ಥಾನನಿಧಿ, ಅಡಿಗಡಿಗೆ ದಿವ್ಯಕ್ಷೇತ್ರ,
ಅಡಿಗಡಿಗೆ ನಿಧಿಯು ನಿಧಾನ ನೋಡಯ್ಯಾ!
ಆತನ ಇರವೆ ವಾರಾಣಸಿ, ಅವಿಮುಕ್ತಕ್ಷೇತ್ರ,
ಲಿಂಗದೇವನ ಶರಣ ಸ್ವತಂತ್ರನಾಗಿ. –ಬವದೀ. 849

ಶರಣರು ಪಾವನ ಚರಿತ್ರರು, ಪವಿತ್ರಾತ್ಮರು. ಅವರಿರುವುದು ಜಂಗಮಕ್ಷೇತ್ರ ಶರಣನು ಇರುವುದು ಸ್ಥಾನನಿಧಿ ; ನಿಧಿ ಭೌತಿಕ ಸಂಪತ್ತನ್ನು ಸಂಕೇತಿಸಿದರೆ. ಶರಣನು ಜ್ಞಾನಸಂಪತ್ತಿನ ನಿಧಿ. ಅವರಿರುವುದು

ದಿವ್ಯಕ್ಷೇತ್ರ ಅವರ ಇರುವಿಕೆಯೇ ದೊಡ್ಡ ಪುಣ್ಯದ ನಿಧಾನ. ಶರಣನಿದ್ದ ಸ್ಥಳ ಕಾಶಿಗಿಂತಲಧಿಕ. ಅವಿಮುಕ್ತ ಕ್ಷೇತ್ರ ಏಕೆಂದರೆ ಶರಣನು ಸ್ವತಂತ್ರನೂ ಸ್ವಾಭಿಮಾನಿಯೂ ಆಗಿ ಬದುಕುವ ಧೀರ.

848. ಶರಣನ ನಿಲುವು

ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ:
ಇದಾವಂಗಳವಡುವುದಯ್ಯಾ?
ನಿಧಾನ ತಪ್ಪಿ ಬಂದಡೆ ಒಲ್ಲೆನೆಂಬವರಿಲ್ಲ,
ಪ್ರಮಾದವಶದಿಂ ಬಂದಡೆ ಹುಸಿಯೆನೆಂಬವರಿಲ್ಲ
ನಿರಾಶೆ, ನಿರ್ಭಯ ಲಿಂಗದೇವಾ
ನೀನೊಲಿದ ಶರಣಂಗಲ್ಲದಿಲ್ಲ! –ಬವದೀ. 850

ಸಂಪತ್ತನ್ನು ಗಳಿಸುವುದರಲ್ಲಿ ಪ್ರಾಮಾಣಿಕತೆ, ಶುಚಿತ್ವ ಪ್ರಾಣದಲ್ಲಿ ನಿರ್ಭಯ ಅಳವಡುವುದು ದುರ್ಲಭ. ಸಂಪತ್ತು ಯಾವುದಾದರೂ ಮೂಲದಿಂದ ಬಂದು ಸೇರುತ್ತದೆ ಎಂಬ ಅವಕಾಶ ಸಿಕ್ಕರೆ ಒಲ್ಲೆ ಎನ್ನುವ ಧೀಮಂತರು ಸಿಗುವುದಿಲ್ಲ. ಪ್ರಾಣಕ್ಕೆ ಏನಾದರೂ ವಿಪತ್ತು ಎರಗಿದರೆ ತಪ್ಪಿಸಿಕೊಳ್ಳಲಿಕ್ಕಾಗಿ ಸುಳ್ಳು ಹೇಳದೆ ಇರುವವರು ಇಲ್ಲ. ನಿಜವಾದ ಶರಣರು ಮಾತ್ರ ತಾವು ಹಿಡಿದ ನಿಷ್ಠೆ ಬಿಡುವುದಿಲ್ಲ. ಅವರ ಲಕ್ಷಣ ನಿರಾಶೆ ಮತ್ತು ನಿರ್ಭಯ ; ಆಸೆ-ಆಮಿಷಕ್ಕೆ ಬಲಿಯಾಗುವುದಿಲ್ಲ. ಪ್ರಾಣಭಯದಿಂದ ಅಂಜುವುದಿಲ್ಲ.

849. ಶರಣರು ಸದಾಚಾರಿಗಳು.

ಶರಣಸನ್ಮತವಪ್ಪ ನಿಜಗುಣಭರಿತನಪ್ಪಡೆ,
ಸತ್ವ ರಜ ತಮ ಕ್ರೋಧ ಬಿಡದನ್ನಕ್ಕ ಅನುಭಾವವೆಲ್ಲಿಯದೋ?
ಆತ್ಮಸ್ತುತಿ ಪರನಿಂದೆಯ ಬಿಡದನ್ನಕ್ಕ,
ಅರಿಷಡ್ವರ್ಗ ದಶವಾಯು ಬೆರೆಸಿಪ್ಪ
ತನುಗುಣ ಬಿಡದನ್ನಕ್ಕ. ಸಂಸಾರ ಮಾಣ್ದಲ್ಲದೆ
ಶರಣಸಜ್ಜನಿಕೆ, ಸಮಯಾಚಾರ, ನಿಜವ್ರತವು ದುರಾಚಾರಿಗಳಿಗಳವಡದು,
ನಮ್ಮ ಲಿಂಗದೇವನ ಶರಣರಿಗಲ್ಲದೆ. –ಬವದೀ. 851

ಶರಣನು ಇತರ ಶರಣರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಸದ್ಗುಣಗಳಿಂದ ಕೂಡಿರಬೇಕು. ಹಾಗಲ್ಲದೆ ಕೋಪವನ್ನು ಸಾತ್ವಿಕವಾಗಿ, ರಾಜಸಿಕವಾಗಿ, ತಾಮಸಿಕವಾಗಿ ಮೂರು ರೀತಿಯಲ್ಲಿ ಬಿಡದಿದ್ದರೆ ಅಂಥವರಿಗೆ ಅಧ್ಯಾತ್ಮಿಕ ಅನುಭಾವ ಸಿದ್ಧಿಸದು. ತಾಮಸ ಕೋಪ ಎಂದರೆ ಹೊಡೆದು ಬಡಿದು ಹಿಂಸಿಸುವುದು ; ರಾಜಸ ಕೋಪವೆಂದರೆ ಬೈದು, ನಿಂದಿಸಿ, ನೋಯಿಸುವುದು. ಸಾತ್ವಿಕ ಕೋಪವೆಂದರೆ ಮನಸ್ಸಿನಲ್ಲೇ ಶಪಿಸಿ ಕೆಟ್ಟದ್ದು ಬಯಸುವುದು. ಶರಣನು ಆತ್ಮ ಸ್ತುತಿ, ಸ್ವಪ್ರಶಂಸೆಗಳನ್ನು ಮತ್ತು ಪರನಿಂದೆಯನ್ನು ಬಿಡಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಅರಿಷಡ್ವರ್ಗಗಳಿಂದ ಕೂಡಿದ ತನುಗುಣಗಳ ಬಿಡಬೇಕು. ದಶವಾಯುಗಳಾದ ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ (ಮುಖ್ಯ ಪ್ರಾಣಗಳು) ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ (ಉಪ ಪ್ರಾಣಗಳು) ಇವುಗಳ ಸ್ವಾಭಾವಿಕ ಗತಿ ಅಡಗಿ ಇವು ದೈವೀಕರಣಗೊಳ್ಳಬೇಕು. ನಾನು ನನ್ನದು ನನ್ನಿಂದ ನನಗೆ ನನಗಾಗಿ ಎಂಬ ಸ್ವಾರ್ಥಪರ ಸಂಸಾರ ಅಳಿಯಬೇಕು. ದುರಾಚಾರಿಗಳಿಗೆ ಶರಣ ಸಜ್ಜನಿಕೆ, ಸಮಾಯಾಚಾರ, ನಿಜವ್ರತ ಅಳವಡುವುದಿಲ್ಲ. ಲಿಂಗದೇವನ ಶರಣರಿಗಲ್ಲದೆ ಅನ್ಯ ಮಾರ್ಗಿಗಳಿಗೆ ಈ ಎಲ್ಲ ಸದ್ಗುಣ ಅಳವಡದು.

850. ಮಾಯೆಯ ಆಟ

ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ ನೋಡಾ:
ಕೊಲುವುದು ತ್ರೈಜಗವೆಲ್ಲವ, ತನಗೆ ಬೇರೆ ಪ್ರಳಯವಿಲ್ಲ.
ನಾಲ್ಕಡಿಯನ್ನೈದುವುದು, ಲೋಕದ ಕಡೆಯನೆ ಕಾಣ್ಬುದು.

ಸೂಕ್ಷ್ಮ ಪಥದಲ್ಲಿ ನಡೆವುದು, ತನಗೆ ಬೇರೆ ಒಡಲಿಲ್ಲ.
ಅಹಮ್ಮೆಂಬ ಗಾರುಡಿಗನ ನುಂಗಿತ್ತು
ಲಿಂಗದೇವನ ಶರಣರಲ್ಲದುಳಿದವರ ! –ಬವದೀ. 852

ಮಾಯೆಯ ಆಟವನ್ನು ವಿವರಿಸಲಾಗುವುದಿಲ್ಲ. ಇದೊಂದು ಹಾವಿನಂತೆ. ಇದಕ್ಕೆ ತಲೆಬಾಲವಿಲ್ಲ. ಅಂದರೆ ರೂಪವಿಲ್ಲ. ಮೂರು ಲೋಕಗಳನ್ನೂ ತನ್ನ ಚೇಷ್ಟೆಯಿಂದ ಕೊಲ್ಲುವುದು. ಅದಕ್ಕೆ ನಾಶವಿಲ್ಲ. ನಾಲ್ಕು ಹೆಜ್ಜೆಗಳಲ್ಲೇ ಎಲ್ಲವನ್ನೂ ವ್ಯಾಪಿಸುವುದು. ಜಗತ್ತಿನ ತುದಿಯವರೆಗೂ ಸಂಚರಿಸುವುದು. ಸೂಕ್ಷ್ಮವಾದ ರೀತಿಯಲ್ಲಿ ಪ್ರಭಾವ ಬೀರುವುದು. ಅದಕ್ಕೆ ಸ್ಥೂಲ ಶರೀರವಿಲ್ಲ. "ನಾನು" ಹಾಗೆ, ನಾನು ಹೀಗೆ, ಮಾಯೆಯನ್ನು ಗೆದ್ದೆ ಎಂದು ಅಹಮ್ಮಿಸುವ ಗಾರುಡಿಗರನ್ನೇ ನುಂಗುತ್ತದೆ. ಲಿಂಗದೇವನ ಶರಣರು ದೇವನಿಗೆ ಶರಣಾಗುವ ಕಾರಣ ಅವರನ್ನು ಬಿಟ್ಟು ಉಳಿದೆಲ್ಲರನ್ನೂ ಮಾಯೆ ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುತ್ತದೆ.

851. ಹಿರಿಯರ ಅಜ್ಞಾನ

ಆದಿತ್ಯ ಸೋಮರು ಆಗಿಹೋಗುತ್ತ-ಇದ್ದಹರು.
ಬ್ರಹ್ಮ ಪ್ರಳಯಕ್ಕೊಳಗಾದ, ಹರಿಯ ಸಿಂಹಾಸನವಡಗಿತ್ತು.
ಅತೋ ನಾಸ್ತಿ, ಇತೋ ನಾಸ್ತಿ.
ರೋಮಜರೆಂಬವರು ಸಿಟ್ಟುಗುಟ್ಟಿ ತರುಮರನಡಿಯಲ್ಲಿದ್ದರು.
ಮಾರ್ಕಂಡೇಯ ಮಹಾಮುನಿ ಸ್ವೇಚ್ಛಾಮರಣಿ ಎನಿಸಿಕೊಂಡನಲ್ಲದೆ
ಲಿಂಗದ ನಿಜವನರಿಯನು, ಇದು ಕಾರಣ ಲಿಂಗದೇವಾ
ನೀವು ಮಾಡಿದ ಬಯಲು ಭಕ್ಷಿಸಿತ್ತು, ಅನಂತ ಹಿರಿಯರನು! –ಬವದೀ. 853

ಒಮ್ಮೆ ಸೃಷ್ಟಿ ಲಯವಾದಾಗ ಸೂರ್ಯ–ಚಂದ್ರರು ತಣ್ಣಗಾಗಿ, ನಾಶವಾಗುವರು. ಪುನಃ ಸೃಷ್ಟಿಯಾದಾಗ ಪ್ರಕಾಶಿಸುವರು. ಬ್ರಹ್ಮನೂ ಪ್ರಳಯಕ್ಕೆ ಒಳಗಾದ. ವಿಷ್ಣುವಿನ ಆಳಿಕೆಯೂ ನಿಂತಿತ್ತು. ಅತ್ತಲೂ ಇಲ್ಲ. ಇತ್ತಲೂ ಇಲ್ಲ ಎಂಬ ಅತಂತ್ರ ಸ್ಥಿತಿ. ಹಲವು ಕಾಲ ತಪಸ್ಸು ಮಾಡಿ ಮೈತುಂಬ ಕೂದಲು ಬೆಳೆದ ರೋಮಜರೆಂಬುವರು ದೇವನನ್ನು ಅರಿಯಲು ಆಗದೆ ಅಸಮರ್ಥರಾಗಿ ಗಿಡಮರಗಳ ಕೆಳಗೆ ಆಶ್ರಯ ಪಡೆದಿದ್ದಾರೆ. ಮಾರ್ಕಂಡೆಯ ಮಹಾಮುನಿ ಸ್ವೇಚ್ಛಾಮರಣಿ ಎನಿಸಿಕೊಂಡನಲ್ಲದೆ ಲಿಂಗದೇವನ ಸ್ವರೂಪವನ್ನು ಅರಿತು, ಸಾಕ್ಷಾತ್ಕರಿಸಿಕೊಳ್ಳಲಿಲ್ಲ. 'ಲಿಂಗದೇವಾ ನಿನ್ನ ಮಾಯೆ (ಲೀಲೆ) ಅನಂತ ಹಿರಿಯರನ್ನು ದಿಕ್ಕುತಪ್ಪಿಸಿತು. ಬಹುಜನ ಮುನಿಗಳು ದೇವಾನುದೇವತೆಗಳೆನಿಸಿಕೊಂಡವರು ಸೃಷ್ಟಿಕರ್ತ ಲಿಂಗದೇವನನ್ನು ಅರಿತು, ಆರಾಧಿಸದೆ ಏನೇನನ್ನೋ ಆರಾಧಿಸಿ ಭವಕ್ಕೆ ಒಳಗಾದರು' ಎಂಬುದು ಈ ವಚನದ ಮರ್ಮ.

852. ಅನುಭಾವ ಕಷ್ಟಸಾಧ್ಯ

ಆದಿಯಲ್ಲಿ ಶಿವಬೀಜವಲ್ಲದವರಿಗೆ ವೇದ್ಯವಾಗದು ಶಿವಜ್ಞಾನ, ಶಿವಭಕ್ತಿ.
ಲಿಂಗಸ್ಥಲವಳವಡದು, ಜಂಗಮಸ್ಥಲವಳವಡದು,
ಪಾದೋದಕ ಪ್ರಸಾದಸ್ಥಲವಳವಡದು.
ನರಕದಲ್ಲಿ ಬೀಳುವ ಕರ್ಮಿಗಳಿಗೆ
ಲಿಂಗದೇವನ ಶರಣರನುಭಾವ ನೆಲೆಗೊಳದು. –ಬವದೀ. 854

ದೈವೀ ಅಂಶವಿಲ್ಲದವರಿಗೆ ಶಿವಜ್ಞಾನವಾಗಲಿ, ಶಿವಭಕ್ತಿಯಾಗಲಿ ಅಳವಡದು. ಯಾವ ರೀತಿ ಕಾಡುಗಳು ಮಳೆಯ ಮೋಡಗಳನ್ನು ಆಕರ್ಷಿಸುತ್ತವೋ ವ್ಯಕ್ತಿಯಲ್ಲಿಯ ಶಿವಾಂಶವು ಭಕ್ತಿ ಜ್ಞಾನಗಳನ್ನು ಅಳವಡಿಸಿಕೊಂಡು ದೈವೀಕರುಣೆಯನ್ನು ಆಕರ್ಷಿಸುತ್ತದೆ. ಅಂಥವರಿಗೆ ಲಿಂಗದೇವನ ಜ್ಞಾನ ಉಂಟಾಗುವುದು. ಜಂಗಮ ಸೇವೆ ಮಾಡಲು ಪ್ರೇರಣೆ ದೊರೆಯುತ್ತದೆ. ಪಾದೋದಕ ಪ್ರಸಾದ ಸ್ವೀಕಾರದಲ್ಲಿ ಶ್ರದ್ಧೆ ಉಂಟಾಗುತ್ತದೆ. ನರಕದಲ್ಲಿ ಬಿದ್ದು ಕಷ್ಟ ಪಡಬೇಕೆಂಬ ಕರ್ಮಿಗಳಿಗೆ ಇಂಥ ಪ್ರೇರಣೆ ದೊರೆಯುವುದಿಲ್ಲ ; ಲಿಂಗದೇವನ ಶರಣರ ಅನುಭಾವ ಅಳವಡುವುದಿಲ್ಲ.

853. ಅವಗುಣಿಯೊಡನಾಟ ಸಲ್ಲದು.

ಮರುಳ ಕಂಡ ಕನಸಿನ ಪರಿಯಂತೆ ಶಿವಾಚಾರ,
ಕರಿಯು ಕನ್ನಡಿಯೊಳಗಡಗಿದಂತಯ್ಯಾ!
ಗುಣಿ ಅವಗುಣಿಯೊಡನಾಡಿದಡೆ
ಅದೆ ಆತನ ಕರ್ಮದ ಫಲ ನೋಡಾ!
ಲಿಂಗದೇವನ ಶರಣರ ಅನುಭಾವ
ಭವದುಃಖಿಗಳಿಗೆ ವೇದ್ಯವಾಗದಯ್ಯಾ. –ಬವದೀ. 855

ಧರ್ಮವನ್ನು ಅರಿತುಕೊಳ್ಳುವುದು ಬಹಳ ಕಷ್ಟಸಾಧ್ಯ. ಹೀಗಾಗಿ ಬಹಳ ಜನ ದಾರಿತಪ್ಪುವರು. ಹುಚ್ಚನೊಬ್ಬ ಕನಸು ಕಾಣುತ್ತಾನೆ. ಅದನ್ನು ಹೇಳಲು ಅವನಿಗೆ ಸಾಧ್ಯವಾಗದು. ಹಾಗೆ ಧರ್ಮಾಚಾರವಾದ ಶಿವಾಚಾರವನ್ನು ವಿವರಿಸಲು ಬರದು. ಆನೆಯು ಒಂದು ಚಿಕ್ಕ ಕನ್ನಡಿಯಲ್ಲಿ ಪ್ರತಿಬಿಂಬವಾಗಿ ಅಡಗುತ್ತದೆ. ಧರ್ಮಸೂಕ್ಷ್ಮವೂ ಹಾಗೆಯೇ ! ಧರ್ಮ ಶಾಸ್ತ್ರದಲ್ಲಿ ಧರ್ಮವು ಅಡಗಿರುತ್ತದೆ. ಸದಾಚಾರ ಸಂಪನ್ನರು, ಸದ್ಗುಣಿಗಳು ದುರಾಚಾರಿಗಳ ಒಡನಾಡಬಾರದು. ಧರ್ಮ ಸೂಕ್ಷ್ಮ ತಿಳಿದೂ ಸಹ ಸದ್ಗುಣಿ ಅವಗುಣಿಯೊಡನಾಡಿದರೆ ಅದು ಅವನ ಪೂರ್ವಜನ್ಮದ ಕರ್ಮಫಲ. ಲಿಂಗದೇವನ ಶರಣರ ಒಡನಾಟದ ಮಹತ್ವವು ಭವದುಃಖಿಗಳಿಗೆ ಅರ್ಥವಾಗದು.

854. ಮರೆಯದೇ ಪೂಜಿಸು ಲಿಂಗದೇವನ.

ಉಂಬ ಬಟ್ಟಲು ಬೇರೆ ಕಂಚಲ್ಲ,
ನೋಡುವ ದರ್ಪಣ ಬೇರೆ ಕಂಚಲ್ಲ.
ಭಾಂಡ ಒಂದೆ ಭಾಜನ ಬೇರೆ.
ಬೆಳಗೆ ಕನ್ನಡಿಯೆನಿಸಿತ್ತಯ್ಯಾ!
ಅರಿದಡೆ ಶರಣ, ಮರೆದಡೆ ಮಾನವ,
ಮರೆಯದೆ ಪೂಜಿಸು ಲಿಂಗದೇವನ. –ಬವದೀ. 856

ಊಟ ಮಾಡುವ ಗಂಗಾಳ ಕಂಚಿನಿಂದ ಮಾಡಿದ್ದು ; ಮುಖ ನೋಡಿಕೊಳ್ಳುವ ಕನ್ನಡಿಯೂ ಕಂಚಿನಿಂದ ಮಾಡಿದ್ದು. ಬಳಸಿರುವ ಮೂಲಧಾತು ಒಂದೆ, ಆದರೆ ಬಂದಿರುವ ವಸ್ತುಗಳು ಬೇರೆಬೇರೆ. ಕಂಚಿಗೆ (ಮುಖವನ್ನು) ಪ್ರತಿಫಲಿಸುವ ಶಕ್ತಿ ಬಂದಾಗ ಅದು ಕನ್ನಡಿ ಎನ್ನಿಸಿಕೊಂಡಿತು. ಹಾಗೆ ಪ್ರತಿಯೊಬ್ಬರೂ ತಾಯಿಯ ಗರ್ಭದಿಂದ ಬಂದಾಗ ಮರೆದ ಮಾನವ. ಅವನು ಅರಿದು ಶರಣನಾಗುವನು. ಮರೆವಿನ ಸೃಷ್ಟಿಯಲ್ಲಿ ಬಂದ ಮಾನವ ಅರಿವಿನ ಸೃಷ್ಟಿಗೆ ಏರಬೇಕಾದರೆ ಮರೆಯದೆ ಲಿಂಗದೇವನ ಪೂಜಿಸಬೇಕು.

855. ಶರಣರು ಮನದೆರೆದರೆ

ಕೆರೆ ಹಳ್ಳ ಬಾವಿಗಳು ಮೈದೆರೆದರೆ
ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು
ವಾರಿಧಿ ಮೈದೆರೆದರೆ ಮುತ್ತು ರತ್ನಂಗಳ ಕಾಣಬಹುದು.
ನಮ್ಮ ಲಿಂಗದೇವನ ಶರಣರು ಮನದೆರೆದು ಮಾತನಾಡಿದರೆ
ಲಿಂಗದೇವನ ಕಾಣಬಹುದು ! –ಬವದೀ. 857

ಕೆರೆ ಹಳ್ಳ ಬಾವಿಗಳು ಬತ್ತಿ ಹೋದರೆ ಗುಳ್ಳೆ, ಗೊರಚೆ, ಚಿಪ್ಪುಗಳ ಕಾಣಬಹುದು. (ನೀರಿದ್ದಾಗ ಗುಳ್ಳೆ ಇರುತ್ತವೆ. ಬತ್ತಿ ಹೋದಾಗ ಹೇಗೆ ಗುಳ್ಳೆ ಇರಲು ಸಾಧ್ಯ ಎಂಬ ಪ್ರಶ್ನೆ ಏಳುವುದೂ ಸಹಜ. ಗುರು ಬಸವಣ್ಣನವರ ಕಾಲದಲ್ಲಿ ಗುಳ್ಳೆ ಪದಕ್ಕೆ ಬೇರೆ ಅರ್ಥವಿದ್ದರೂ ಇರಬಹುದು.) ಸಮುದ್ರವೇ ಬತ್ತಿ ಹೋದರೆ ಅಲ್ಲಿ ಮುತ್ತು ಹವಳ ಮುಂತಾದ ಬೆಲೆಯುಳ್ಳ ವಸ್ತುಗಳನ್ನು ಕಾಣಬಹುದು. ಹಾಗೆ ಸಾಮಾನ್ಯ ಮಾನವರು ಮಾತನಾಡುತ್ತಲಿದ್ದರೆ ಊಟ, ಉಡುಗೆ, ತೊಡುಗೆ ಮುಂತಾದವುಗಳ ಚರ್ಚೆ ನಡೆಯುತ್ತದೆ. ಅನುಭಾವಿಗಳಾದ

ಲಿಂಗದೇವನ ಶರಣರು ಮನ ಬಿಚ್ಚಿ ಮಾತನಾಡಲು ತೊಡಗಿದರೆ ಅಲ್ಲಿ ದಿವ್ಯಾನುಭವದ ಬೆಳಕು ಹರಿಯುವುದು. ಲಿಂಗಜ್ಞಾನದ ಅಮೃತ ಧಾರೈಸುವುದು.

856. ಕಾಯ-ಜೀವದ ಸಂಯೋಗ

ಪುಣ್ಯಪಾಪವೆಂಬ ಉಭಯ ಕರ್ಮವನಾರು ಬಲ್ಲರಯ್ಯಾ?
ಇವನಾರುಂಬರು?
ಕಾಯ ತಾನುಂಬಡೆ ಕಾಯ ತಾ ಮಣ್ಣು,
ಜೀವ ತಾನುಂಬಡೆ ಜೀವ ತಾ ಬಯಲು,
ಈ ಉಭಯದ ನಿರ್ಣಯವ ಲಿಂಗದೇವಾ,
ನಿಮ್ಮ ಶರಣ ಬಲ್ಲ. –ಬವದೀ. 858

ಈ ವಚನದಲ್ಲಿ ಧರ್ಮಪಿತರು ಅತಿ ಮುಖ್ಯವಾದ ಪ್ರಶ್ನೆಯೊಂದನ್ನು ಎತ್ತಿದ್ದಾರೆ. ಪುಣ್ಯ ಪಾಪ ಎಂಬುವು ಎರಡು ಕರ್ಮಗಳು. ಇವುಗಳ ಫಲವನ್ನು ಉಣ್ಣುವವರು ಯಾರು ? ಶರೀರ ಉಣ್ಣುತ್ತದೆ ಎನ್ನೋಣವೆ ? ಶರೀರವು ಮಣ್ಣು. ಜೀವಾತ್ಮವು ಉಣ್ಣುತ್ತದೆ ಎನ್ನೋಣವೇ ಆತ್ಮವು ಬಯಲು ಸ್ವರೂಪದ್ದು. ಈ ಪ್ರಶ್ನೆಗಳಿಗೆ ಉತ್ತರವನ್ನು ಶರಣನು ಬಲ್ಲ ಎಂದು ಹೇಳಿ ಕೈ ಬಿಡುತ್ತಾರೆ. ಇದರ ಅಂತರಾರ್ಥವನ್ನು ನಾವು ಊಹಿಸೋಣ. ಶರೀರ ಮತ್ತು ಆತ್ಮಗಳ ಸಂಬಂಧ ಕುದುರೆ ಮತ್ತು ಸವಾರನ ಸಂಬಂಧವಿದ್ದಂತೆ. ಆತ್ಮವಿಲ್ಲದ ದೇಹ ನಿಷ್ಕ್ರಿಯ. ದೇಹವಿಲ್ಲದ ಆತ್ಮ ನಿಸ್ಸಹಾಯಕ. ಎರಡೂ ಸೇರಿದಾಗಲೆ ಕ್ರಿಯೆ. ಕುದುರೆ ಹತ್ತಿ ಸವಾರ ಯುದ್ಧ ಮಾಡುವಂತೆ ದೇಹವನ್ನು ಆಶ್ರಯಿಸಿ ಆತ್ಮವು ಕೆಲಸ ಮಾಡುವುದು. ಹೀಗಾಗಿ ದೇಹವೂ ಫಲವನ್ನು ಪಾಪಪುಣ್ಯದ ಪ್ರತ್ಯೇಕವಾಗಿ ಅನುಭವಿಸದು. ಆತ್ಮವೂ ಪ್ರತ್ಯೇಕವಾಗಿ ಅನುಭವಿಸದು. ಎರಡೂ ಕೂಡಿದಾಗ ದೇಹದ ಮೂಲಕ ಆತ್ಮವೂ ಪಾಪ-ಪುಣ್ಯದ ಬಂಧನಕ್ಕೆ ಒಳಗಾಗುವುದು.

857. ಮಾಟದ ಮರ್ಮ

ನಾರುಳಿಯ ಹಣಿದವನಾರಾದಡೆಯೂ ಆಡರೆ?
ನಾರುಳಿದಡೆ ಮುಂದೆ ಅಂಕುರಿತ ಫಲ ತಪ್ಪದು.
ಮಾಡುವನ್ನಕ್ಕ ಫಲದಾಯಕ!
ಮಾಟವರತು ನಿಮ್ಮಲ್ಲಿ ಸಯವಾದಡೆ
ಆತನೆ ಅಚ್ಚ ಶರಣನಯ್ಯಾ, ಲಿಂಗದೇವಾ. –ಬವದೀ. 859

ನಾರುಳಿ ಎಂದರೆ ತೆಂಗಿನಕಾಯಿ. ತೆಂಗಿನಕಾಯಿಗಳನ್ನು ಇಟ್ಟು ಜೂಜಾಡುವ ಆಟವನ್ನು ಆಡುವರು. ತೆಂಗಿನ ಕಾಯಿಯಲ್ಲಿ ನಾರು-ಸಿಪ್ಪೆ ಇದ್ದರೆ ಮಾತ್ರ ಅದು ಮೊಳಕೆಯೊಡೆದು ಗಿಡವಾಗಿ, ಫಲವ ನೀಡುವುದು. ಅದೇ ರೀತಿ ಪಾಪ-ಪುಣ್ಯ ಸಹಿತವಾದ ಮಾಟ(ಕರ್ಮ) ಇದ್ದರೆ ಫಲವಾಗಿ ಜನ್ಮಾಂತರಗಳು ಒದಗುವುವು. ಪುಣ್ಯ ಫಲದಿಂದ ಉತ್ತಮ ಜನ್ಮವೂ, ಪಾಪದ ಫಲದಿಂದ ಹೀನ ಜನ್ಮವೂ ಪ್ರಾಪ್ತವಾಗುವುವು. ಹೀಗೆ ಮಾಟಗಳನ್ನು ಮಾಡುವವರೆಗೂ ಅದರ ಫಲವನ್ನು ಉಣ್ಣಲೇಬೇಕು. ಆದರೆ ಮಾಟದ ಮರ್ಮವನ್ನರಿತು ಲಿಂಗದೇವನಿಗೆ ಅರ್ಪಿಸಿ ಮಾಡಿದರೆ ಅದು ಭವಾಂತರಕ್ಕೆ ಬೀಜವಾಗದು. ಅದೇ ಬಂಧನ ಬಿಡುಗಡೆಗೆ ಕಾರಣವಾಗುವುದು. ಹಾಗೆ ಮಾಡುವವನೇ ನಿಜವಾದ ಶರಣ.

858. ಭಕ್ತನ ಶಿಷ್ಟಾಚಾರ.

ಭಕ್ತನ ಮಠವೆಂದು ಜಂಗಮು ನಡೆದು ಬಂದಲ್ಲಿ,
ಆ ಭಕ್ತನು ಕಾಣುತ್ತ, ಆಸನ ತ್ಯಜತೆಯ ಮಾಡುತ್ತ.
ಕೊಂಕುತ್ತ, ಕೈಮುಗಿದು ನಿಂದಿರ್ದು, ಬಾಗಿ ಬಳುಕುತ್ತ,
'ಬಿಜಯಂ ಮಾಡಿ, ದೇವಾ' ಎಂದು ಕರೆದು, ಕುಳ್ಳಿರಿಸಿ,
ಪಾದಾರ್ಚನೆಯಂ ಮಾಡಿ, ಪಾದೋದಕಮಂ ಕೊಂಡು,

ವಿಭೂತಿ-ವೀಳೆಯಮಂ ಕೊಟ್ಟು,
ಕಂಗಳು ತುಂಬಿ ನಿರೀಕ್ಷಿಸಿ, ಶ್ರೋತ್ರ ತುಂಬಿ ಹಾರೈಸಿ,
ಬಾಯಿ ತುಂಬಿ ಮಾತನಾಡಿ, 'ಏಗುವುದು? ಏ ಬೆಸನೆ'ಂದು
ತನು ಕರಗಿ ಮನ ಕರಗಿ ನೋಡಿ, ಮಾಡುವುದು ಭಕ್ತಿಸ್ಥಲ.
ಬಡವನಾಗಲಿ, ಬಲ್ಲಿದನಾಗಲಿ, ಇನಿತು ಮುಖ್ಯವಾಗಿ
ಮಾಡಿಸಿಕೊಂಬುದು ಜಂಗಮಸ್ಥಲ.
ಈ ಎರಡೊಂದಾದ ಘನವನಂತಿಂತೆಂದುಪಮಿಸಲಾಗದಂತಿರಲಿ!
ಇನಿತಲ್ಲದೆ ಮಾಡಿದ ಮಾಟ ಭಕ್ತಿ-ಸ್ಥಲಕ್ಕೆ ಸಲ್ಲದು,
ಫಲದಾಯಕನ್ನೆಸೆ!
ಇನಿತಲ್ಲದೆ ಮಾಡಿಸಿಕೊಂಬುದು ಜಂಗಮ-ಸ್ಥಲಕ್ಕೆ ಸಲ್ಲದು,
ಉಪಜೀವಿತನ್ನೆಸೆ!
ಈ ಎರಡಕ್ಕೆಯೂ ಭವ ಹಿಂಗದು, ಕಾಣಾ, ಲಿಂಗದೇವಾ ! –ಬವದೀ. 860

ಈ ವಚನದಲ್ಲಿ ಗುರು ಬಸವಣ್ಣನವರು ಭಕ್ತನಿಗೆ ಶಿಷ್ಟಾಚಾರವನ್ನು ಕಲಿಸುತ್ತಾರೆ. ಭಕ್ತನ ಮನೆಯನ್ನು 'ಮಠ' ಎಂದು ಕರೆದುದು ಗಮನಾರ್ಹ. ಕೇವಲ ಮಠಗಳಷ್ಟೆ ಅಧ್ಯಾತ್ಮಿಕ ಕೇಂದ್ರಗಳಾಗದೆ ಭಕ್ತರ ಮನೆಗಳೂ ಅಧ್ಯಾತ್ಮಿಕ ಕೇಂದ್ರಗಳಾಗಬೇಕೆಂಬುದು ಅವರ ಆಶಯ. ಭಕ್ತನ ಮನೆಗೆ ಜಂಗಮನು ಬಂದಾಗ ಆ ಭಕ್ತನು ಅವರನ್ನು ನೋಡುತ್ತಲೇ ಕುಳಿತಿದ್ದ ಆಸನ ಬಿಟ್ಟು ಎದ್ದು ನಿಂತು, ಕೈ ಮುಗಿದು, ಬಾಗಿ ನಮಿಸುತ್ತ 'ದಯಮಾಡಿ ಒಳಗೆ ಬನ್ನಿರಿ' ಎಂದು ಕರೆದು ಕುಳ್ಳಿರಿಸಿ, ಪಾದಾರ್ಚನೆಯಂ ಮಾಡಿ, ಪಾದೋದಕವನ್ನು ಸ್ವೀಕರಿಸಿ, ವಿಭೂತಿ-ವೀಳಯವನ್ನು ಕೊಟ್ಟು ಗೌರವಿಸಬೇಕು. ಅವರನ್ನು ಕಣ್ಣುತುಂಬಿ ನೋಡುತ್ತ, ಅವರ ವಾಣಿಯನ್ನು ಲಕ್ಷ್ಯಗೊಟ್ಟು ಆಲಿಸಿ, ಗೌರವಪೂರ್ಣವಾಗಿ ಮಾತನಾಡಿ, 'ನನ್ನಿಂದ ಏನು ಸೇವೆ ಆಗಬೇಕು ? ಏನು ಬಂದಿರಿ ?' ಎಂದು ತನು ಕರಗಿ, ಮನ ಕರಗಿ ವಿನಯದಿಂದ ವರ್ತಿಸುವುದೇ ಭಕ್ತಿಸ್ಥಲ. ಆ ಭಕ್ತ ಬಡವನೇ ಇರಲಿ, ಬಲ್ಲಿದನೇ ಇರಲಿ ಮನಸ್ಸು ತುಂಬಿ ಮಾಡಿಸಿಕೊಳ್ಳುವುದೇ ಜಂಗಮನ ಕರ್ತವ್ಯ. ಇಂಥ ಭಕ್ತ-ಜಂಗಮರ ಸಂಬಂಧ ಒಂದಾದುದನ್ನು ಯಾವ ಪದಗಳಿಂದ ಬಣ್ಣಿಸಬಹುದು ? ಹೀಗಲ್ಲದೆ ವರ್ತಿಸುವ ಭಕ್ತನ ಮಾಟ ಭವಾಂತರಕ್ಕೆ ಕಾರಣವಾಗುವುದು. ಜಂಗಮನು ಸೂಕ್ತವಾಗಿ ಮಾಡಿಸಿಕೊಳ್ಳದಿದ್ದರೆ ಅವನು ಜಂಗಮನಲ್ಲ. ಉಪಜೀವನಕ್ಕಾಗಿ ವೇಷ ತೊಟ್ಟವನು ಎನ್ನಬೇಕಾಗುವುದು. ಉಭಯತರಿಗೂ ಭವಾಂತರ ತಪ್ಪದು.

859. ಭಕ್ತಿಯ ಮರ್ಮ

ಲಿಂಗನಿಷ್ಠೆ ಪೂಜೆಯಲ್ಲಿ ಬೀಯವಾಯಿತ್ತು,
ಜಂಗಮನಿಷ್ಠೆ ತ್ಯಾಗದಲ್ಲಿ ಬೀಯವಾಯಿತ್ತು,
ಪ್ರಸಾದನಿಷ್ಠೆ ಬೆರಕೆಯಲ್ಲಿ ಬೀಯವಾಗಿತ್ತು.
ಒಂದೊಂದರ ನಿಷ್ಠೆ ಅಂದಂದಿಗೆ ಬೀಯವಾಗಿತ್ತು,
ಲಿಂಗದೇವನ ಭಕ್ತಿ ತ್ರಿಜಗವನಾಳಿಗೊಂಡಿತ್ತು. –ಬವದೀ. 861

ಬೀಯ ಅಂದರೆ ವ್ಯಯವಾಗುವುದು ಎಂದರ್ಥ. ಇಲ್ಲಿ ವ್ಯಯ ಎಂದರೆ ವ್ಯರ್ಥ ಎಂದೂ ಅರ್ಥಮಾಡಬಹುದು. ಒಬ್ಬ ವ್ಯಕ್ತಿಯಲ್ಲಿ ಎಷ್ಟು ಲಿಂಗನಿಷ್ಠೆ ಇದೆ, ಏಕದೇವೋಪಾಸನೆ ಇದೆ ಎಂಬುದು ತಿಳಿಯುವುದು ಅವನು ಅನ್ಯ ದೈವಗಳನ್ನು ಪೂಜಿಸಿದಾಗ, ದುರ್ಬಲ ಮನಸ್ಸಿನಿಂದ ಅನ್ಯ ದೈವಗಳನ್ನು ಪೂಜಿಸಿದಾಗ ಅವನ ಲಿಂಗನಿಷ್ಠೆ ವ್ಯರ್ಥವಾಗುವುದು. ಅವನ ಭಕ್ತಿ ಎನ್ನುವುದು ಪರೀಕ್ಷೆಗೆ ಒಳಪಡುವುದು ಯಾವಾಗ ? ಆಚರಣೆ ಮಾಡುವಾಗ. ತಪ್ಪು ಆಚರಣೆ ಮಾಡಿದಾಗ ಭಕ್ತಿ ನಿಷ್ಠೆ ವ್ಯರ್ಥವಾಗುವುದು. ಪ್ರಸಾದ (ಊಟ)ದ ನಿಷ್ಠೆ ನಿಯಮ ಮೀರಿ ತಿಂದಾಗ, ನಾಲಿಗೆಯ ರುಚಿಗೆ ಬಲಿಯಾದಾಗ ವ್ಯರ್ಥವಾಗುವುದು. ಹೀಗೆ ಒಂದೊಂದರ ನಿಷ್ಠೆಯನ್ನು ಸಾಧಕ ಕಳೆದುಕೊಳ್ಳುವನು. ಲಿಂಗದೇವನ ಭಕ್ತಿ ಕಠಿಣತಮ. ಮೂರು ಜಗವನ್ನು ಅಲ್ಲಾಡಿಸುತ್ತದೆ.

860. ಭಕ್ತಿಯ ವಿಶೇಷ.

ತೆರನನರಿವುದು ಅಪೂರ್ವ, ಅರಿದು ಮರೆವುದು ಅಪೂರ್ವ,
ಕೂಡೆ ಶರಣೆಂಬುದು ಅಪೂರ್ವ!
ಲಿಂಗದೇವನ ಭಕ್ತಿ
ಅಭಿಮಾನಿಯ ಜವ್ವನದಂತೆ! —ಬವದೀ. 862

ಯಾವುದು ಅಪೂರ್ವ ಅನುಭವ ? ಪರಮಾತ್ಮನ ಸ್ವರೂಪವನ್ನು ಅರಿಯುವುದು ಅಪೂರ್ವ. ಅರಿದ ನಂತರ ಅವನ ದಿವ್ಯಾನುಭವದಲ್ಲಿ ಓಲಾಡುತ್ತ ಮೈಮರೆವುದು ಇನ್ನೂ ಅಪೂರ್ವ. ಅಂಥ ದಿವ್ಯಾನುಭವ ಪಡೆದ ಶರಣರ ಒಡನಾಡುತ್ತ ಅವರಿಗೆ ಶರಣೆಂಬುವುದು ಇನ್ನೂ ಅಪೂರ್ವ. ಪ್ರೀತಿಪಾತ್ರರ ಯೌವ್ವನ ಅತ್ಯಂತ ಪ್ರಿಯವಾದಂತೆ ಲಿಂಗದೇವನ ಭಕ್ತಿ ಅತ್ಯಂತ ಪ್ರಿಯವಾದುದು.

861. ಲಿಂಗ ಪ್ರಿಯ

ಐದು ಮಾನವ ಕುಟ್ಟಿ ಒಂದು ಮಾನವ ಮಾಡು, ಕಂಡಾ ಮದವಳಿಗೆ!
ಇದು ನಮ್ಮ ಬಾಳುವೆ, ಮದವಳಿಗೆ!
ಇದು ನಮ್ಮ ವಿಸ್ತಾರ, ಮದವಳಿಗೆ!
ಮದವಳಿದು ನಿಜವುಳಿದ ಬಳಿಕ ಅದು ಸತ್ಯ ಕಾಣಾ,
ಲಿಂಗದೇವಾ. —ಬವದೀ. 863

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಎಂಬ ಪಂಚಭೂತಗಳಿಂದಾದ ಅಂಗ (ಶರೀರ)ವನ್ನು ಲಿಂಗಸ್ವರೂಪವನ್ನಾಗಿ ಮಾಡು ಎಲೈ ವಧುವೆ (ಮನಸ್ಸೆಂಬ ವಧುವೆ). ಇದೇ ನಿಜವಾದ ಬಾಳುವೆ. ಇದೇ ನಮ್ಮ ಸಂಸಾರದ ವೈಭವ. ಅಹಂಕಾರವಳಿದು ಲಿಂಗದೇವನಿಗೆ ಶರಣಾದ ಬಳಿಕ ಇದೇ ನಮ್ಮ ಜೀವನವೆಂದು ತಿಳಿ ಎಲೆ ಮನವೆ (ವಧುವೆ).

862. ಶರಣನ ಲಕ್ಷಣ

ಕುಲಮದವಳಿಯದನ್ನಕ್ಕ ಶರಣನಾಗಲೇಕೆ ?
ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ ?
ಹಮ್ಮಿನ ಸೊಮ್ಮಿನ ಸಂಬಂಧ ಬಿಟ್ಟು
ಕಿಂಕಿಲ ಕಿಂಕಿಲ ಕಿಂಕಿಲನಾಗಿರಬೇಕು !
ಹೆಪ್ಪನೆರೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು
ಲಿಂಗದೇವಾ ನಿಮ್ಮ ಶರಣರು ! —ಬವದೀ. 864

ಶರಣನ ಲಕ್ಷಣವೆಂದರೆ ಕುಲಮದವನ್ನು ಅಳಿದುಕೊಳ್ಳುವುದು. ಜಾತಿ ಪ್ರಜ್ಞೆ, ಕುಲ ಪ್ರಜ್ಞೆ ದೇಹಕ್ಕೆ ಸಂಬಂಧಿಸಿದವು. ಶರಣನು ದೇಹಭಾವ ಅಳಿದುಕೊಂಡವನು. ಆದ್ದರಿಂದ ಅವನಲ್ಲಿ ಕುಲಪ್ರಜ್ಞೆ ಇರಬಾರದು. ಶ್ರೇಷ್ಠ ಜಾತಿಯಲ್ಲಿ ಹುಟ್ಟಿದವನು ಮೇಲರಿಮೆಯನ್ನು ಕಳೆದುಕೊಂಡರೆ ಕೆಳಜಾತಿಯಲ್ಲಿ ಹುಟ್ಟಿದವನು ಕೀಳರಿಮೆಯನ್ನು ಗೆಲ್ಲಬೇಕು. ಭಕ್ತನಾದವನು ವಿಧಿ, ಹಣೆಬರಹ ಎಂದು ಮಾತನಾಡಬಾರದು. ಗುರುವು ತಲೆಯ ಮೇಲೆ ಹಸ್ತವನ್ನಿಟ್ಟು ಮಂತ್ರೋಪದೇಶ ಮಾಡಿದಾಗಲೇ ಹಣೆ ಬರಹ ಅಳಿಸಿಹೋಗಿ ಹರಜನ್ಮ ಬಂದಿರುತ್ತದೆ. ವಿಧಿಯ ಶಕ್ತಿಯನ್ನು ಮೀರಿದ್ದು ಲಿಂಗದೇವನ ಕರುಣೆ. ಸುಖವೇ ಬರಲಿ ಕಷ್ಟವೇ ಬರಲಿ ಅದು ದೇವರು ಕೊಡುವ ಪರೀಕ್ಷೆ ಎಂದು ನಗುನಗುತ್ತ ಎದುರಿಸಬೇಕು. "ದೇವರನ್ನು ನಂಬಿದರೂ ಹಣೆಬರಹ ತಪ್ಪಲಿಲ್ಲ." ಎಂದು ಗೋಳಾಡಬಾರದು. ಶರಣರ ಲಕ್ಷಣ ವಿನಯ. ಇತರರೊಡನೆ ಹಮ್ಮಿನಿಂದ ವರ್ತಿಸಬಾರದು. ಹೆಪ್ಪನ್ನು ಹಾಕಿದ ಹಾಲು ಪರಿಪಕ್ವವಾಗಿ ತುಪ್ಪವಾಗುವಂತೆ ಶರಣರು ದೈವೀಕರಣಗೊಂಡ ಮಾನವರಾಗುತ್ತಾರೆ.

863. ಶರಣ ಮಾನವನಾಗನು.

ಮಣ್ಣ ಮಡಕೆ ಮಣ್ಣಾಗದು ಕ್ರೀಯಳಿದು,
ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರೀಯಳಿದು,
ಹೊನ್ನು ಕಬ್ಬುನವಾಗದು ಕ್ರೀಯಳಿದು,
ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು ಕ್ರೀಯಳಿದು,
ಲಿಂಗದೇವನ ಶರಣನಾಗಿ
ಮರಳಿ ಮಾನವನಾಗ ಕ್ರೀಯಳಿದು. —ಬವದೀ. 865

ಹಸಿಯ ಮಣ್ಣು ಕುಂಬಾರನ ಆವಿಗೆಯಲ್ಲಿ ಸುಟ್ಟು ಮಡಿಕೆಯಾದ ಮೇಲೆ ಪುನಃ ಹಸಿಯ ಮಣ್ಣಾಗದು, ಎಂಥದೇ ಪರಿಸ್ಥಿತಿಯಲ್ಲಿ. ಅದೇ ರೀತಿ ಬೆಣ್ಣೆ ಕರಗಿ ತುಪ್ಪವಾದ ಬಳಿಕ ಪುನಃ ಅದು ಬೆಣ್ಣೆಯಾಗದು. ಪರುಷಮುಟ್ಟಿ ಕಬ್ಬಿಣ ಬಂಗಾರವಾದ ಬಳಿಕ ಪುನಃ ಅದು ಕಬ್ಬಿಣವಾಗದು. ನೀರಿನಲ್ಲಿ ಕಪ್ಪೆ ಚಿಪ್ಪಿನಲ್ಲಿ ಮುತ್ತು ಹುಟ್ಟುತ್ತದೆ. ಆದರದು ಪುನಃ ನೀರಾಗಿ ಪರಿವರ್ತನೆಗೊಳ್ಳದು. ಹಾಗೆ ಪರಿಪಕ್ವಾತ್ಮರಾದ ಶರಣರು ಎಂಥದೇ ಪ್ರಸಂಗದಲ್ಲಿ ಶರಣನ ಘನತೆಯನ್ನು ಕಳೆದುಕೊಂಡು ಕೆಳಮಟ್ಟದ ಮಾನವರಾಗಿ ವರ್ತಿಸರು.

864. ಶರಣನಿಗೆ ಭವಬಂಧನವಿಲ್ಲ.

ಪೂರ್ವಜನ್ಮ ನಿವೃತ್ತಿಯಾಗಿ ಗುರುಕರುಣವಿಡಿದಂಗೆ
ಬಂಧನವೆಲ್ಲಿಯದೊ?
ಭವಬಂಧನವೆಲ್ಲಿಯದೊ?
ಸಂಕಲ್ಪ-ವಿಕಲ್ಪವೆಂಬ ಸಂದೇಹ ಕಳೆದುಳಿದವಂಗೆ
ಲಿಂಗದೇವರ ತ್ರಿಸಂಧ್ಯಾಕಾಲದಲ್ಲಿ ಮಾಣದೆ ನೆನೆವಂಗೆ! —ಬವದೀ. 866

ಗುರುಕಾರುಣ್ಯವಾಗುತ್ತಲೇ ಪೂರ್ವದ ಕರ್ಮ ನಿವೃತ್ತಿಯಾಗುತ್ತದೆ. ಗುರುವು ಹಣೆಯ ಮೇಲೆ ಭಸ್ಮವನ್ನು ಧರಿಸುತ್ತಲೇ ಪೂರ್ವಲಿಖಿತ ತೊಡೆದುಹೋಗುತ್ತದೆ. ಅಂಗೈಯಲ್ಲಿ ಇಷ್ಟಲಿಂಗವನ್ನು ಕೊಟ್ಟು ತಲೆಯ ಮೇಲೆ ಕೈಯಿಟ್ಟು ಮಂತ್ರೋಪದೇಶವನ್ನು ಮಾಡುತ್ತಲೇ ನರಜನ್ಮ ಹೋಗಿ ಹರ ಜನ್ಮವಾಗುತ್ತದೆ. ಆದ್ದರಿಂದ ಗುರು ಕಾರುಣ್ಯ ಪಡೆದವನು ಭವಬಂಧನದ ನಿವಾರಣೆಯಾಯಿತೆಂದು ತಿಳಿಯಬೇಕು. ನಂಬಿಕೆ ಬಹಳ ಮುಖ್ಯ. ಮನಸ್ಸು ಹೊಯ್ದಾಡಬಾರದು. ಸಂಕಲ್ಪ ವಿಕಲ್ಪ ಮಾಡಬಾರದು. ಸಂದೇಹವನ್ನು ಅಳಿದುಕೊಳ್ಳಬೇಕು. ಲಿಂಗಾಯತ ಧರ್ಮಾನುಯಾಯಿ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಹೀಗೆ ಮೂರು ವೇಳೆ ಲಿಂಗಾರ್ಚನೆ ಮಾಡುವ ಪುಣ್ಯವಂತ. ಆದ್ದರಿಂದ ಅವನಿಗೆ ಭಯ ಬಂಧನದ ಭಯವಿಲ್ಲ.

ಸಮರ್ಥ ಗುರು ಯೋಗ್ಯ ಶಿಷ್ಯ ಇದ್ದಾಗ ವಚನಗಳ ಸತ್ಯ ಮನವರಿಕೆಯಾಗುತ್ತದೆ. ಯಾಂತ್ರಿಕ ದೀಕ್ಷೆಯಲ್ಲಿ ಯಾವ ವಿಶೇಷ ಅನುಭವವೂ ಆಗುವುದಿಲ್ಲ. ಶ್ರದ್ಧಾವಂತ ಶಿಷ್ಯನಿಗೆ ಸಮರ್ಥಗುರು ದೀಕ್ಷೆ ನೀಡಿದಾಗ ಅಕ್ಷರಶಃ ಪೂರ್ವಲಿಖಿತ ತೊಡೆದು ಪುನರ್ಜನ್ಮ ಉಂಟಾಗುತ್ತದೆ.

ಅಮೇರಿಕಾದಲ್ಲಿ ಬಸವ ಜಯಂತಿ ಆಚರಣೆ

ವರದಿ-ಬಸವಣ್ಣೆಪ್ಪ ಕಾಮಣ್ಣವರ್, ಟೆಕ್ಸಾಸ್

ಟೆಕ್ಸಾಸ್ : ದಿನಾಂಕ 28-4-2012 ರಂದು ವೀರಶೈವ ಸಮಾಜ ಆಫ್ ನಾರ್ಥ ಅಮೆರಿಕಾ ಇದರ ಆಶ್ರಯದಲ್ಲಿ ಡಲ್ಲಾಸ್‌ದಲ್ಲಿರುವ ಹಿಂದು ಏಕತಾ ಮಂದಿರಲ್ಲಿ ಬಸವಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಪ್ರಥಮದಲ್ಲಿ ವಿಶ್ವಗುರು ಬಸವಣ್ಣನವರ ಪೂಜೆಯನ್ನು ಮತ್ತು ಪ್ರಾರ್ಥನೆಯನ್ನು, ಬಸವ ಮಂತ್ರದೊಂದಿಗೆ ಹಾಗು 'ಮುಕ್ತಿದಾಯಕ ಶರಣರಕ್ಷಕ ನಿತ್ಯ ಮೂರುತಿ ಬಸವನೆ' ಹಾಡಿನೊಂದಿಗೆ ಎಲ್ಲ ಶರಣೆಯರು ಮಾಡಿದರು. ನಂತರ ಸಾಮೂಹಿಕವಾಗಿ ಇಷ್ಟಲಿಂಗ ಪೂಜೆ ಪ್ರಾರ್ಥನೆಯನ್ನು ಗದಗದ ಬಸವಣ್ಣಪ್ಪ ಕಾಮಣ್ಣವರ ಮತ್ತು ಅವರ ಧರ್ಮ ಪತ್ನಿ ಶರಣೆ ಮಂಗಳಾ ಕಾಮಣ್ಣವರ ಮಾಡಿ ತೋರಿಸಿದರು. ಮಕ್ಕಳಿಂದ ಇಂಗ್ಲಿಷ, ಕನ್ನಡದಲ್ಲಿ ವಚನ ಗಾಯನ ತುಂಬಾ ಅಚ್ಚುಕಟ್ಟಾಗಿ ನಡೆಯಿತು. ಕೇವಲ ಮಕ್ಕಳಿಗಾಗಿ ಬಸವಣ್ಣನವರ ಜನನ ಜೀವನ ಸಾಧನೆ ಕುರಿತು ಕ್ವಿಜ್, ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯನ್ನು ಸಮಾಜ ಅಧ್ಯಕ್ಷೆ ರಾಜಶ್ರೀ ಗುಟ್ಟಿಗೋಳಿ ನಡೆಸಿಕೊಟ್ಟರು. ಸ್ಪರ್ಧೆಯಲ್ಲಿ ಮಕ್ಕಳು ಆಸಕ್ತಿಯಿಂದ ಭಾಗವಹಿಸಿದ್ದರು.

ನಂತರ ನಡೆದ ವಿಚಾರಗೋಷ್ಠಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ॥ ಚಂದ್ರಯ್ಯ ಅವರು ಬಸವಣ್ಣನವರ ಜೀವನ ಸಾಧನೆ ಕುರಿತು ತುಂಬಾ ಮಾರ್ಮಿಕವಾಗಿ ಎಲ್ಲರ ಮನ ಮುಟ್ಟುವಂತೆ ಇಂಗ್ಲೀಷಿನಲ್ಲಿ ಮಾತನಾಡಿದರು.

ಬಸವಣ್ಣನವರು ದಲಿತರು ಹಿಂದುಳಿದವರಿಂದ ಹಿಡಿದು ಎಲ್ಲರಿಗೂ ಇಷ್ಟಲಿಂಗ ದೀಕ್ಷೆಕೊಟ್ಟು ಎಲ್ಲರೂ ತಮ್ಮ ದೇವರನ್ನು ತಾವೇ ಸ್ವತಃ ಪೂಜಿಸಲು ಕಲಿಸಿಕೊಟ್ಟರು ಮತ್ತು ಸ್ತ್ರೀ ವರ್ಗದವರಿಗೂ ಲಿಂಗ ದೀಕ್ಷೆಮಾಡಿ ಪೂಜಿಸಲು ಕಲಿಸಿದರು. ಮುಖ್ಯವಾಗಿ ಅವರು ಕಾಯಕ ದಾಸೋಹದ ಮುಖಾಂತರ ಪ್ರೋತ್ಸಾಹಿಸಿ ಎಲ್ಲರೂ ತಪ್ಪದೆ ಕಾಯಕ ಮಾಡಬೇಕು ಅದರಿಂದ ಬಂದ ಆದಾಯದಲ್ಲಿ ತಮಗೆ ಬೇಕಾದಷ್ಟು ಉಪಯೋಗಿಸಿ ಉಳಿದುದನ್ನು ದಾಸೋಹ ಮಾಡಬೇಕು. ದಾಸೋಹ ಇದರಲ್ಲಿ ವಿಶಿಷ್ಟ ಅರ್ಥವಿದೆ ಕಾರಣ ಕಲ್ಯಾಣದಲ್ಲಿ ನೀಡುವವರು ಇದ್ದರೆ ವಿನಾ ಬೇಡುವವರು ಯಾರೂ ಇರಲಿಲ್ಲ ಇದರಿಂದ ಬಸವಣ್ಣನವರು ಒಂದು ಹೊಸ ಆಯಾಮವನ್ನು ಹುಟ್ಟುಹಾಕಿದರು.

ಜಗತ್ತಿನಲ್ಲಿ ಎಲ್ಲೂ ದೊರಕದ ವಚನ ಸಾಹಿತ್ಯ ರಚನೆಯಿಂದ ಕನ್ನಡದಲ್ಲಿ ಒಂದು ಬಗೆಯ ಹೊಸ ಪರಂಪರೆಯನ್ನು ಬೆಳೆಸಿದರು. ಅನುಭವ ಮಂಟಪ ರಚಿಸಿ ಹಿಂದುಳಿದವರಿಂದ ಮಹಿಳೆಯರಿಂದ ಎಲ್ಲರೂ ವಚನ ರಚಿಸಲು ಕಲಿಸಿಕೊಟ್ಟರು ಎಂದರು ಮತ್ತು ಕನ್ನಡ ಭಾಷೆ ಪ್ರಾಚೀನತೆ ಮಹತ್ವ ಕುರಿತು ಬಹಳ ವಿಶಿಷ್ಟ ರೀತಿಯಲ್ಲಿ ಡಾ॥ ಚಂದ್ರಯ್ಯ ಮಾತನಾಡಿದರು. ಸಮಾರಂಭದಲ್ಲಿ ಭಾಗವಹಿಸಿದ ಶರಣರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿದರು.

ಇದಾದ ನಂತರ ಚಿಕ್ಕ ಮಕ್ಕಳು ವಚನಗಾಯನದಲ್ಲಿ ಭಾಗವಹಿಸಿದ್ದರು. ಬಸವಣ್ಣನವರ ಜೀವನ ಕುರಿತು ಭಾಷಣ ಮಾಡಲಾಯಿತು. ಕೊನೆಯಲ್ಲಿ ಎಲ್ಲ ಶರಣ ಶರಣೆಯರು ಹಾಡಿದ ಮಂಗಲಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ನಂತರ ಎಲ್ಲರಿಗೂ ಪ್ರಸಾದವನ್ನು ವಿತರಿಸಲಾಯಿತು.

ವಚನ ಸಾಹಿತ್ಯ ಎರವಲು ತಂದದ್ದಲ್ಲ. ಅದು ಕನ್ನಡದ ಸ್ವಾರ್ಜಿತ ಸ್ವತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ. ಅವರು ಅಚ್ಚ ಕನ್ನಡದ ಬೇಸಾಯಗಾರರು.

ಶ್ರೀ ಎಮ್.ಆರ್.ಶ್ರೀನಿವಾಸಮೂರ್ತಿ

ಶ್ರೇಷ್ಠ ಸಾಹಿತಿಗಳು

ವಧು ವರಾನ್ವೇಷಣೆ ವಿಭಾಗ

1. ಪ್ರತಿಭಾ. ತಂದೆ ಅಜ್ಜಣ್ಣ, ತಾಯಿ. ಸಾವಿತ್ರಮ್ಮ ಊರು ಚಳ್ಳಕೆರೆ. ಜನ್ಮ ದಿನಾಂಕ 1985.
   ಶಿಕ್ಷಣ : ಬಿ.ಎ, ದೂರವಾಣಿ : 08195-222775, 9481415427. ಬಸವ ತತ್ತ್ವದ
   ವರ. ಸರಕಾರಿ ನೌಕರಿ ಅಥವಾ ಬಿಜಿನೆಸ್
2. ರವಿಚಂದ್ರ, ತಂದೆ. ಪಂಡಿತಾರಾಧ್ಯ, ತಾಯಿ.ಉಮಾದೇವಿ ಹುಲಿಕಂಠಿಮಠ
   ಜನ್ಮ ದಿನಾಂಕ : 26-9-1982. ಶಿಕ್ಷಣ : ಬಿ.ಕಾಂ,
   ಹುಬ್ಬಳ್ಳಿಯಲ್ಲಿ ಸ್ವಂತ ಮನೆ ಇದೆ. ಕೆಲಸ : 5 ವರ್ಷದಿಂದ VRL ಕಂಪನಿಯಲ್ಲಿ
   ಅಕೌಂಟೆಂಟ್ ದೂರವಾಣಿ : 9740044276
   ವಧು: ಸುಂದರವಾಗಿದ್ದು ಯಾವುದಾದರೂ ಡಿಗ್ರಿ, ಬಸವ ತತ್ತ್ವದವರಿಗೆ ಆದ್ಯತೆ.
3. ಶರಣು. ತಂದೆ ಬಸವರಾಜ ಸಜ್ಜನ್, ಜನ್ಮ ದಿನಾಂಕ: 3-10-1982
   ಶಿಕ್ಷಣ : SSLC. Height 5'.5". ಕೆಲಸ : ವ್ಯವಸಾಯ ಮತ್ತು ಕಿರಾಣಿ ಅಂಗಡಿ.
   ದೂರವಾಣಿ : 08472-213370, 9740260799, 9945721479
4. ಅಶೋಕ ಆರ್.ಎಸ್. ತಂದೆ : ಸುಂದರೇಶ್. ಜನ್ಮ ದಿನಾಂಕ: 21-6-1983
   ಶಿಕ್ಷಣ : I.T.I. Height 5'.2". Work : Sales Executive. Bangalore Vijayanagar,
   Mob : 9886564190
5. ವಾಯ್.ಬಿ. ಶ್ರೀಕಾಂತ್ ತಂದೆ : ಬಸವರಾಜಪ್ಪ, ಜನ್ಮ ದಿನಾಂಕ: 9-1-1983
   ಶಿಕ್ಷಣ : M.A. M.Phil. PG. Dip. Work : Asst. Curator in High Court, Bangalore
   Mob : 9448971997. ವಧು : Any Degree. ಬಸವ ತತ್ತ್ವದವರಿಗೆ ಆದ್ಯತೆ.
6. ಬಸವಶ್ರೀ (ಮಂಜುಳ). ತಂದೆ : ಬಸಣ್ಣ ಸೋಮನಾಳ. ಜನ್ಮ ದಿನಾಂಕ: 3-10-1986
   ಶಿಕ್ಷಣ : B.Com. NTC. Height 5'.2". Work : Computer work in Gangavathi. Fair Colour.
   (Mob : 9986743426 ಅಣ್ಣ ಬಸವರಾಜ್)
   ವರ. ಸರಕಾರಿ ನೌಕರಿ ಅಥವಾ ಬಿಜಿನೆಸ್. ಬಸವ ತತ್ತ್ವದವರಿಗೆ ಆದ್ಯತೆ.
7. ಶ್ವೇತಾ ಪ್ರಕಾಶ ಕಂಬಾರ, ಯಮಕನಮರಡಿ. ತಾ-ಹುಕ್ಕೇರಿ. ಜಿ-ಬೆಳಗಾಂ.
   ಜನ್ಮ ದಿನಾಂಕ: 31-7-1991, ಶಿಕ್ಷಣ : B.Ed. Height 5'.2". Fair Colour.
   Mob : 9632551167, 9449915937 ವರ. ಸರಕಾರಿ ನೌಕರಿ ಅಥವಾ ಇಂಜಿನಿಯರ್.
8. ಶ್ರೀದೇವಿ ಕಲ್ಲೂರ, ತಾಯಿ-ಕುಸುಮಾ ಕಲ್ಲೂರ. ತಂದೆ-ಕರಿಬಸವನಗೌಡ
   ಊರು : ಬಳ್ಳಾರಿ. Work : Software Engineer in Intel Company, Bangalore.
   ಜನ್ಮ ದಿನಾಂಕ: 12-4-1981, Height 5'.6". Mob : 9845321910
9. ವಿನಾಯಕ ಕಲ್ಲೂರ, ತಾಯಿ-ಕುಸುಮಾ ಕಲ್ಲೂರ. ತಂದೆ-ಕರಿಬಸವನಗೌಡ
   ಊರು : ಬಳ್ಳಾರಿ. Education : MBA, Hospet. Work : Penna Cements, Hospet.
   ಜನ್ಮ ದಿನಾಂಕ: 5-1-79 ಶಿಕ್ಷಣ : Mob : 9845321910.
10. ಜಿ. ಶೈಲಜಾ. Height 5'.4". Fair Colour. ಶಿಕ್ಷಣ : MBBS. KIMS DOMB.
    ತಂದೆ-ಡಿ.ಬಿ.ವಿರುಪಾಕ್ಷಗೌಡ, ಶಿಕ್ಷಕರು. ಊರು : ಹುಬ್ಬಳ್ಳಿ
    ಜನ್ಮ ದಿನಾಂಕ: 8-3-1986, Mob : 9740563005 / 9482992789
    ವರ. MBBS. MD

ವಧು-ವರರ ವಿವರಗಳನ್ನು ಸತತವಾಗಿ ಮೂರು ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ವಧು-ವರಾನ್ವೇಷಿಗಳಾದವರು ಇನ್ನು ಮುಂದೆ ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ 500/-ರೂ.ಗಳ ಎಂ.ಓ/ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ ತೆಗೆದು ವಿವರಗಳೊಡನೆ ಕಳಿಸಬೇಕಾಗಿ ಕೋರಿಕೆ. ಹಣ ಕಳಿಸದಿದ್ದರೆ ವಿವರಗಳನ್ನು ಪ್ರಕಟಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : ಶರಣ. ಚಂದ್ರಮೌಳಿ ಎಮ್ಮಿಗನೂರು, ದೂ. 9448466805

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ನಡೆಸುತ್ತಿರುವ

ಅನಾಥಾಲಯಗಳಿಗೆ ಪ್ರವೇಶಾವಕಾಶ

1. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವ ಗಂಗೋತ್ರಿ ಅನಾಥಾಲಯ.
ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
9845399698 / 9448386717
ಬಾಲಕರಿಗೆ 7ನೆಯ ತರಗತಿಯವರೆಗೆ ಮಾತ್ರ,
ಬಾಲಕಿಯರಿಗೆ ಒಂದರಿಂದ ಹತ್ತನೆಯ ತರಗತಿಯವರೆಗೆ.

2. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಅಕ್ಕಮಹಾದೇವಿ ಅನಾಥಾಲಯ
ಸಂಪರ್ಕಿಸಬೇಕಾದವರು : ಶರಣೆ. ನೀಲಾಂಬಿಕಾ ಇಂಗಳಳ್ಳಿ, 9886667244
ಬಾಲಕರಿಗೆ ಒಂದರಿಂದ ಏಳು
ಬಾಲಕಿಯರಿಗೆ ಒಂದರಿಂದ ಹತ್ತನೆ ತರಗತಿಯವರೆಗೆ.

3. ಕೂಡಲಸಂಗಮದಲ್ಲಿ ಬಸವ ಕೃಪಾ ಅನಾಥಾಲಯ.
ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು
9341819847
ಬಾಲಕರಿಗೆ ಮಾತ್ರ ; ಒಂದರಿಂದ ಹತ್ತನೆ ತರಗತಿಯವರೆಗೆ.

4. ಬಸವ ಕಲ್ಯಾಣದಲ್ಲಿ ಅಕ್ಕನಾಗಲಾಂಬಿಕಾ ಅನಾಥಾಲಯ
ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು
9480497346
ಬಾಲಕ-ಬಾಲಕಿಯರಿಬ್ಬರಿಗೂ ಒಂದನೆಯ ತರಗತಿಯಿಂದ 10ನೆಯ ತರಗತಿಯವರೆಗೆ ಪ್ರವೇಶಾವಕಾಶ.

5. ಮುಕ್ತಾಯಕ್ಕ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬಸವ ಕಲ್ಯಾಣ
5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ, ಬಾಲಕಿಯರಿಗೆ ಮಾತ್ರ,
ಸಂಪರ್ಕಿಸಬೇಕಾದವರು : ಶರಣೆ. ಮಹಾದೇವಮ್ಮ .. 9480497346

6. ಕಲ್ಯಾಣಮ್ಮ (ಅನಾಥಾಲಯ) ನಿರ್ಗತಿಕ ಮಕ್ಕಳ ಕುಟೀರ. ಬೀದರ ಬಸವ ಮಂಟಪ.
ಕೇವಲ ಬಾಲಕಿಯರು. ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ,
ಪೂಜ್ಯ ಶ್ರೀ ಮಾತೆ ನಿಶ್ಚಲಾಂಬಾ 9663502141.

7. ನೀಲಾಂಬಿಕಾ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬೀದರ ಬಸವ ಮಂಟಪ. 5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ.
ಪೂಜ್ಯ ಶ್ರೀ ಮಾತೆ ನಿಶ್ಚಲಾಂಬಾ 9663502141.

2012 ಜೂನ್ ಒಂದರಿಂದ ಆರಂಭವಾಗುವ ತರಗತಿಗಳಿಗೆ ಸೇರಿಸಬಯಸುವವರು ಸಂಪರ್ಕಿಸಬಹುದು.



ಬಸವ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ನೆ.ಲ. ನರೇಂದ್ರಬಾಬು ಅವರಿಗೆ ಸನ್ಮಾನ
ಕರ್ನಾಟಕ ರಾಜ್ಯ ಹೆಳವ ಸಮಾಜದ ಅಧ್ಯಕ್ಷರಾದ ಈ. ಕೃಷ್ಣಪ್ಪನವರು ಇದ್ದಾರೆ





ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ. ಕೆಮಿಸ್ಟ್ರಿಯಲ್ಲಿ 12 ಚಿನ್ನದ ಪದಕ ಪಡೆದಿರುವ
ಮೈಸೂರಿನ ಜಯಣ್ಣ-ರತ್ನಮ್ಮನವರ ಮಗಳು ಮಾನಸಳಿಗೆ ಸತ್ಕಾರ.

CPMG/KA/BGW/50/2012-2014, RNI 19980/70, POSTED AT MBC BANGALORE GPO
ON 3,10,20 OF EVERY MONTH. LICENCED TO POST WITHOUT PRE PAYMENT
WPP-17, PAGES 36+4 (COVER PAGES)



48 ದಿವಸಗಳ ಕಾಲ ನಡೆದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ
ಚಾಮರಾಜ ನಗರ ಪ್ರವಚನದ ಮುಕ್ತಾಯದಂದು ಮಾತಾದ್ವಯರ ಮೆರವಣಿಗೆ







ದಿ.6-5-2012ರಂದು ಸಮಾರೋಪ ಸಮಾರಂಭ. ಕದಳಿ ವೇದಿಕೆಯ ಅಧ್ಯಕ್ಷೆ ಮಾದಲಾಂಬಿಕೆ ಮತ್ತು
ಪೂಜ್ಯ ತೋಂಟದಾರ್ಯ ಸ್ವಾಮಿಗಳಿಂದ ಉದ್ಘಾಟನೆ